# ನಾದನೂಪುರ ವಂಡಾರು
# Nadanoopura Vandaru



ಮುಖ್ಯಸ್ಥರು – ವಂಡಾರು ಗೋವಿಂದ
97418 47278

ಪ್ರಧಾನ ಸಂಪಾದಕರು – ಶುಭಾಶಯ
9482847978

Nadanoopura Yakshothana Trust (NYT) (R.)
Vandaru, Marvi, Vandaru village and Post,
Brahmavara Taluk, Udupi District – 576223
Email : nadanoopuravandaru@gmail.com
Website – https://nyt.1ngo.in/

ಪರಿವಿಡಿ

ಬೋರ್ಡ್ ರೂಮ್
ಸಂಪಾದಕೀಯ
ಯಕ್ಷಗಾನದಲ್ಲಿ ಶಕ್ತಿ (ದೇವಿ)ಯ ಆರಾಧನೆ
ಮೇಳದರ್ಪಣ–ಇತಿಹಾಸದ ಪುಟಗಳಲ್ಲಿ ದುರಂತ ಕಂಡ ಬೆಳ್ಮಣ್ಣು ಮೇಳ
ಬಯಲಾಟ ಅಕಾಡೆಮಿ ಪ್ರಶಸ್ತಿ ಪುರಸ್ಕೃತ– ಬೇಗಾರ್ ಪದ್ಮನಾಭ ಶೆಟ್ಟಿಗಾರ್
ಧೀರ ಕಲೆಯೊಳಗೆ ಕೀರವಾಣಿಯರು–16– ಸುಮಾ ಗಡಿಗೆಹೊಳೆ
ಬವಲಾಡಿ ಹಿರಿಯಣ್ಣ ಹೆಬ್ಬಾರರ ಪ್ರಸಂಗಗಳು

## ತಿಂಗಳ ಹೈಲೈಟ್ಸ್

**ಯಕ್ಷಗಾನದಲ್ಲಿ ಶಕ್ತಿ (ದೇವಿ) ಯ ಆರಾಧನೆ**
**ಇತಿಹಾಸದ ಪುಟಗಳಲ್ಲಿ ದುರಂತ ಕಂಡ ಬೆಳ್ಮಣ್ಣು ಮೇಳ**
**ಬಯಲಾಟ ಅಕಾಡೆಮಿ ಪ್ರಶಸ್ತಿ ಪುರಸ್ಕೃತ – ಬೇಗಾರ್ ಪದ್ಮನಾಭ ಶೆಟ್ಟಿಗಾರ್**
**ಬವಲಾಡಿ ಹಿರಿಯಣ್ಣ ಹೆಬ್ಬಾರರ ಪ್ರಸಂಗಗಳು**

### ಬೋರ್ಡ್ ರೂಂ



**ಗೋವಿಂದ ವಂಡಾರು**

**ಆತ್ಮೀಯರೆ,**

ನಮ್ಮ ಸಮಸ್ತ ಓದುಗರಿಗೆ ನವರಾತ್ರಿ ಹಬ್ಬದ ಶುಭಾಶಯಗಳು.

ನವರಾತ್ರಿಯಲ್ಲಿ ದೇವಿಯ ಅಥವ ನವಶಕ್ತಿಯ ಆರಾಧನೆ ನಡೆಯುತ್ತದೆ. ಯಕ್ಷಗಾನ ಕಲೆಗೂ ದೇವತಾರಾಧನೆಗೂ ಅನನ್ಯ ಸಂಬಂಧವಿದೆ. ದೇವಿಗೆ ಸಂಬಂಧಿಸಿದ ದೇವಳಗಳಿಂದ ನಡೆಸಲ್ಪಡುವ ಯಕ್ಷಗಾನ ಮೇಳಗಳಲ್ಲಿ ಪ್ರಧಾನವಾಗಿ ದೇವಿ ಮಹಾತ್ಮೆ ಅಥವ ಕ್ಷೇತ್ರದ ಅಧಿದೇವತೆಯ ಮಹಿಮೆ ಸಾರುವ ಪುಣ್ಯ ಕಥಾನಕಗಳ ಪ್ರದರ್ಶನ ಹೆಚ್ಚಾಗಿರುತ್ತದೆ. ಸಾಮಾನ್ಯವಾಗಿ ತೆಂಕಿನಲ್ಲಿ ಕಟೀಲು ಮೇಳ ಹಾಗೂ ಬಡಗಿನಲ್ಲಿ ಮಂದಾರ್ತಿ ಮೇಳ ದೇವಿ ಆರಾಧನೆಗೆ ಸಂಬಂಧಿಸಿದ ಕ್ಷೇತ್ರಗಳಿಂದ ನಡೆಸಲ್ಪಡುವ ಪ್ರಸಿದ್ಧ ಮೇಳಗಳು. ಈ ಮೇಳಗಳಲ್ಲಿ ಹೆಚ್ಚಾಗಿ ಶ್ರೀ ದೇವಿ ಮಹಾತ್ಮೆ ಹಾಗೂ ಮಂದಾರ್ತಿ ಮೇಳದಲ್ಲಿ ದೇವಿ ಮಹಾತ್ಮೆಯೊಂದಿಗೆ ಮಂದಾರ್ತಿ ಕ್ಷೇತ್ರ ಮಹಾತ್ಮೆ ಹೆಚ್ಚಾಗಿ ನಡೆಯುವಂಥದ್ದು. ಹಾಗೆಯೇ ಬಪ್ಪನಾಡು ದುರ್ಗಾಪರಮೇಶ್ವರಿ ದೇವಳಕ್ಕೆ ಸಂಬಂಧ ಪಟ್ಟ ಮೇಳ ಬಪ್ಪನಾಡು ಕ್ಷೇತ್ರ ಮಹಾತ್ಮೆಯನ್ನು, ಸಸಿಹಿತ್ಲು ದೇವಳದ ಮೇಳ ಭಗವತಿ ಕ್ಷೇತ್ರ ಮಹಾತ್ಮೆ ಹಾಗೂ ಕಟೀಲು ಕ್ಷೇತ್ರ ಮಹಾತ್ಮೆ ಇವು ದೇವೀ ಶಕ್ತಿಯ ಕಥೆಯನ್ನು ಸಾರುವ ಪ್ರಸಂಗಗಳು. ಈ ಪುಣ್ಯ ಪ್ರಸಂಗಗಳೇ ಹೆಚ್ಚಾಗಿ ಪ್ರದರ್ಶನವಾಗಲು ಮುಖ್ಯ ಕಾರಣ ಸೇವಾದರರ ಹರಕೆ ಎಂದೆನ್ನಬಹುದು. ಸಾಮಾನ್ಯವಾಗಿ ಮಾನವನ ಗ್ರಹಿಕೆಗೆ ಸಿಗದ ಅನೇಕ ಸಮಸ್ಯೆಗಳಿಗೆ ಮಾನವ ದೇವರ ಮೊರೆ ಹೋಗುವುದಿದೆ. ಹಾಗೆಯೇ ಆರೋಗ್ಯ ಸಮಸ್ಯೆಗಳು ಕುಟುಂಬ ಕಲಹಗಳು ಆಸ್ತಿ ವಿವಾದಗಳು ನೆನೆಸಿಕೊಂಡ ಕಾರ್ಯ ಫಲಪ್ರದವಾಗಲು ಕ್ಷೇತ್ರ ಮಹಾತ್ಮೆ ಅಥವ ದೇವಿ ಮಹಾತ್ಮೆ ಪ್ರಸಂಗವನ್ನೇ ಆಡಿಸುತ್ತೇವೆಂದು ಭಕ್ತರು ಹರಕೆ ಹೇಳಿಕೊಳ್ತಾರೆ. ಅಷ್ಟೇ ಅಲ್ಲದೆ ದೇವಿ ಮಹಾತ್ಮೆ ನೋಡುತ್ತೇವೆ ಎಂದೂ ಹರಕೆ ಹೇಳುವವರಿದ್ದಾರೆ. ವಿಶೇಷತೆ ಎಂದರೆ ಈ ಕಾಲದಲ್ಲೂ ಪವಾಡ ಎನ್ನುವಂತೆ ಹರಕೆ ಆಟಗಳು ಕಡಿಮೆ ಆಗಿದ್ದಿಲ್ಲ. ಮಂದಾರ್ತಿ ಮೇಳದಲ್ಲಿ ವರ್ಷಕ್ಕೆ ಒಂದು ಸಾವಿರಕ್ಕಿಂತಲೂ ಹೆಚ್ಚು ಪ್ರದರ್ಶನ ಕಂಡರೆ ಅದಕ್ಕೆ ದ್ವಿಗುಣವಾಗಿ ಹರಕೆ ಆಟಗಳು ಬುಕ್ ಆಗುವುದು ಇದರ ವಿಶೇಷ. ವಿವಿಧ ಕಾಲಗಳ ವಿವಿಧ ರಸೋತ್ಪತ್ತಿ ಹೊಂದಿರುವ ಕಾರಣದಿಂದ ರಂಗದ ದೃಷ್ಟಿಯಿಂದ ಇದೊಂದು ಪರಿಪೂರ್ಣ ಪ್ರಸಂಗ ಎನಿಸಿಕೊಂಡಿದೆ.

ಶ್ರೀ ದೇವಿ ಮಹಾತ್ಮೆ ಪ್ರಸಂಗವನ್ನು ನಾನು ಕೇಳಿ ತಿಳಿದಂತೆ ಹಿಂದೆ 9 ದಿನಗಳ ಕಾಲ ಆಡುತ್ತಿದ್ದರಂತೆ. ಒಂಬತ್ತು ದಿನಗಳಲ್ಲಿ ದೇವಿಯ ಒಂಬತ್ತು ಅವತಾರಗಳೂ ರಂಗದಲ್ಲಿ ಪ್ರದರ್ಶನವಾಗುತ್ತಿತ್ತು. ಹತ್ತನೆಯ ದಿನ ಅಷ್ಟಭುಜೆಯಾಗಿ ಮಹಿಷಾಸುರನ್ನು ಮರ್ದಿಸಿದ ದೇವಿ ಮಹಿಷ ಮರ್ದಿನಿ ಎಂದು ಕರೆಸಿಕೊಳ್ಳುತ್ತಾಳೆ. ಆ ದಿನವನ್ನು ವಿಜಯದಶಮಿ ಎಂದು ಆಚರಿಸುತ್ತೇವೆ. ಯಕ್ಷಗಾನದಲ್ಲೂ ದೇವಿ ಮಹಿಷಾಸುರನೊಂದಿಗೆ ಒಂಬತ್ತು ಅವತಾರಗಳಲ್ಲಿ ಒಂಬತ್ತು ಆಯುಧಗಳಿಂದ ಒಂಬತ್ತು ರಾತ್ರಿ ಸೆಣಸಾಡಿದ ಸನ್ನಿವೇಷಗಳಿವೆ. ಆದರೆ ಈಗ ದೇವಿ ಪಾತ್ರಧಾರಿ ಈ ಒಂಬತ್ತು ದುರ್ಗೆಯರ ಅವತಾರ ಹಾಗೂ ಪರಾಕ್ರಮಗಳನ್ನು ಸಂಭಾಷಣೆಯಲ್ಲಿ ಉಲ್ಲೇಖಿಸಿ ಮುಗಿಸುತ್ತೇವೆ. ಪ್ರಸ್ತುತ ನಾವು ಆಡುವ ನೋಡುವ ದೇವಿ ಮಹಾತ್ಮೆಯಲ್ಲಿ ಆದಿಮಾಯೆ, ಮಹಿಷ ಮರ್ದಿನಿ ಕದಂಬ ಕೌಶಿಕೆ, ಸಪ್ತ ಮಾತೃಕೆಯರು, ಚಂಡಿಕೆ, ರಕ್ತೇಶ್ವರಿ ಶಕ್ತಿಯ ಮಹಿಮೆಗಳನ್ನು ನೋಡಬಹುದು.

ಇನ್ನು ಮಂದಾರ್ತಿ ಕ್ಷೇತ್ರ ಮಹಾತ್ಮೆಯಲ್ಲಿ ಮಂದಾರ್ತಿ ದೇವಿ, ಕೊಲ್ಲೂರು ಮೂಕಾಂಬಿಕೆ ಹಾಗೂ ದುರ್ಗಾಪರಮೇಶ್ವರಿ ದೇವಿಯರ ಮಹಿಮೆಗಳಿವೆ. ದೇವಿ ಮಹಾತ್ಮೆ ಪ್ರಸಂಗವನ್ನು ಬೇರೆ ಬೇರೆ ಕವಿಗಳು ಬರೆದಿದ್ದಾರೆ. ತೆಂಕಿನಲ್ಲಿ ಇದು ಹೆಚ್ಚು ಬೇಡಿಕೆಯ ಪ್ರಸಂಗ. ಅಗರಿ ಶ್ರೀನಿವಾಸ ಭಾಗವತರು, ಬಲಿಪ ಭಾಗವತರು

ಸೇರಿದಂತೆ ನಾಲ್ಕು–ಐದು ಜನ ಕವಿಗಳು ದೇವಿ ಮಹಾತ್ಮೆ ಪ್ರಸಂಗವನ್ನು ಬರೆದಿದ್ದಾರೆ. ಈಗ ಹೆಚ್ಚಾಗಿ ಅಗರಿ ಭಾಗವತರು ಬರೆದ ಪ್ರಸಂಗವನ್ನು ಆಡಿ ತೋರಿಸುತ್ತಾರೆ. ಹಾಗೆಯೇ ತೆಂಕಿನ ದೇವಿ ಮಹಾತ್ಮೆ ಪ್ರಸಂಗವನ್ನೇ ಕೆಲವು ಪದ್ಯಗಳ ಬದಲಾವಣೆಗಳೊಂದಿಗೆ ಬಡಗಿನಲ್ಲಿ ಆಡಿ ತೋರಿಸುತ್ತಾರೆ. ಆದರೆ ಮಂದಾರ್ತಿ ಮೇಳದಲ್ಲಿ ಕಟೀಲು ಮೇಳದಂತೆ ದೇವಿ ಮಹಾತ್ಮೆ ಪ್ರಸಂಗದಲ್ಲಿ ಬ್ಯಾಂಡ್ ವಾದ್ಯಗಳ ಅಬ್ಬರವಿರುವುದಿಲ್ಲ.

ಸ್ತ್ರೀ ಶಕ್ತಿಯ ಆರಾಧನೆಯ ಇನ್ನೊಂದು ಹೆಸರಾಂತ ಪ್ರಸಂಗ ಶ್ರೀ ಮಂದಾರ್ತಿ ಕ್ಷೇತ್ರ ಮಹಾತ್ಮೆ. ಹರಕೆಯ ಆಟಕ್ಕಾಗಿಯೇ ಈ ಪ್ರಸಂಗ ಮೀಸಲು. ಮಂದಾರ್ತಿ ಕ್ಷೇತ್ರ ಮಹಾತ್ಮೆ ಹಾಗೂ ಮತ್ತೊಂದು ಜನಪ್ರಿಯ ಪ್ರಸಂಗ ಬಪ್ಪನಾಡು ಕ್ಷೇತ್ರ ಮಹಾತ್ಮೆ ಎರಡನ್ನೂ ಬರೆದ ಕವಿ ಸೀತಾನದಿ ಗಣಪಯ್ಯ ಶೆಟ್ಟಿಯವರು. ಬೇಸರದ ಸಂಗತಿ ಎಂದರೆ ಪುರಾಣದ ಅದೆಷ್ಟೋ ಮೌಲ್ಯಯುತವಾದ ಪ್ರಸಂಗಗಳ ಕವಿಯ ಬಗ್ಗೆ ಎಲ್ಲೂ ಉಲ್ಲೇಖ ಇರುವುದಿಲ್ಲ. ಹಾಗೆಯೇ ಮಂದಾರ್ತಿ ಕ್ಷೇತ್ರ ಪ್ರಸಂಗ ಪ್ರಸಿದ್ದಿ ಪಡೆದಷ್ಟು ಇದನ್ನು ಬರೆದ ಕವಿ ಯಾರೆಂಬುದೇ ಹೆಚ್ಚಿನವರಿಗೆ ಗೊತ್ತಿಲ್ಲ. ಹಾಗಾಗಿ ಕವಿಯನ್ನು ಸ್ಮರಿಸಿಕೊಳ್ಳುವ ಅಗತ್ಯ ಬಹಳಷ್ಟಿದೆ.

ದೇವಿ ಮಹಾತ್ಮೆ ನನ್ನಿಷ್ಟದ ಪ್ರಸಂಗ ಹಾಗೂ ಪಾತ್ರಗಳಲ್ಲೊಂದು. ಬಾಲ್ಯದ ದಿನಗಳಿಂದಲೂ ನಾನು ದೇವಿ ಮಹಾತ್ಮೆ ಪ್ರಸಂಗವನ್ನು ನೋಡಿ ಬೆಳೆದವನು ನಾನು ಮೊದಲ ಬಾರಿಗೆ ದೇವಿ ಪಾತ್ರವನ್ನು ನಿರ್ವಹಿಸಿದ್ದು ಮಾರಣಕಟ್ಟೆ ಮೇಳದಲ್ಲಿರುವಾಗ. ಮಾರಣಕಟ್ಟೆ ಕ್ಷೇತ್ರ ಮಹಾತ್ಮೆಯಲ್ಲಿ ಮಹಿಷಾಸುರ ವಧೆಯ ಸನ್ನಿವೇಷವಿದೆ. ಆ ಪ್ರಸಂಗದ ದೇವಿಯಾಗಿ ಮೊದಲು ನಾನು ಕಾಣಿಸಿಕೊಂಡೆ. ನಾನು ನಿರ್ವಹಿಸುವ ದೇವಿ ಪಾತ್ರಕ್ಕೆ ಮೊದಲಾಗಿ ಪ್ರೇರಣೆಯಾದವರು ಮೊಳಹಳ್ಳಿ ಕೃಷ್ಣರವರು. ಯಕ್ಷಗಾನ ಕಲೆ ಆರಾಧನೆಯಿಂದ ಕಲಾತ್ಮಕವಾಗಿ ವಾಣಿಜ್ಯಾತ್ಮಕವಾಗಿ ಸ್ಪರ್ಧಾತ್ಮಕ ಬೆಳವಣಿಗೆ ಕಾಣುತ್ತಿದ್ದರೂ ಇಂದಿಗೂ ದೇವಿ ಮಹಾತ್ಮೆ, ಮಂದಾರ್ತಿ ಕ್ಷೇತ್ರ ಮಹಾತ್ಮೆ ಇಂತಹ ಪುಣ್ಯ ಕಥಾನಕಗಳಿಗಿರುವ ಬೇಡಿಕೆ ಕುಸಿದಿಲ್ಲ. ಹಾಗೂ ದೇವಿ ಪಾತ್ರಧಾರಿಯನ್ನು ಭಕ್ತಿಯಿಂದ ಕಾಣುವ ಪ್ರೇಕ್ಷಕರು ಇಂದಿಗೂ ಇದ್ದಾರೆ ಎನ್ನುವುದು ಯಕ್ಷಗಾನದ ವೈಶಿಷ್ಟ್ಯತೆ. ದುಷ್ಟರ ದಮನ ಶಿಷ್ಟರ ರಕ್ಷಣೆಯ ಸಂದೇಶವನ್ನು ನೀಡುವ ನವರಾತ್ರಿ ಪರ್ವ ಸರ್ವರಿಗೂ ಸನ್ಮಂಗಳವನ್ನುಂಟು ಮಾಡಲಿ ಎಂದು ಹಾರೈಸುತ್ತಾ, ನಮಸ್ಕಾರ. ***ನಿಮ್ಮವನೆ, ಗೋವಿಂದ ವಂಡಾರು***

---

## ಸಂಪಾದಕೀಯ

***ಆತ್ಮೀಯ ಓದುಗರೆ,***

ಲೋಗೊ ಅಥವ ಲಾಂಛನ ಎನ್ನುವುದು ಒಂದು ದೇಶದ, ರಾಷ್ಟ್ರದ, ಭಾಷೆಯ, ಒಂದು ಕೂಟ, ಸಂಘಟನೆಯ, ಸಂಸ್ಥೆಯ, ಪತ್ರಿಕೆಯ, ಮಾಧ್ಯಮದ, ಕಂಪನಿಯ, ಕೈಗಾರಿಕೆ, ರಾಜಕೀಯ ಪಕ್ಷ, ಹೀಗೆ ಹೆಚ್ಚಿನ ಎಲ್ಲಾ ಕ್ಷೇತ್ರಗಳು ಅವುಗಳ ವ್ಯಾಪ್ತಿ ಹಾಗೂ ಕೆಲಸ–ಕಾರ್ಯಗಳನ್ನು ಪ್ರತಿನಿಧಿಸುವಂತಹಾ ಒಂದು ಸಂಕೇತ ಚಿಹ್ನೆ. ಪ್ರತಿಯೊಂದು ದೇಶಕ್ಕೂ, ರಾಜ್ಯಕ್ಕೂ ಅದರದ್ದೆ ಆದ ಲೋಗೋ ರೂಪಿಸಿರುತ್ತಾರೆ. ಗುರುತಿಸುವಿಕೆಗೆ ಲಾಂಛನ ತುಂಬ ಮುಖ್ಯ. ಅಶೋಕ ಸ್ಥಂಭದಲ್ಲಿರುವ ನಾಲ್ಕು ಮುಖಗಳ ಸಿಂಹ ನೋಡಿದಾಕ್ಷಣ ಯಾವ ದೇಶದ ವ್ಯಕ್ತಿಯೂ ಹೇಳಬಹುದು, ಇದು ಭಾರತದ ಲಾಂಛನ ಎಂಬುದಾಗಿ. ಹಾಗೆ ಕರ್ನಾಟಕ ರಾಜ್ಯಕ್ಕೂ ಲಾಂಛನ ಇದೆ. ರಾಜಕೀಯ ಪಕ್ಷಗಳಿಗೂ ಲಾಂಛನ ಇದೆ. ಟಾಟ ಬಿರ್ಲಾ ಇನ್ ಫೋಸಿಸ್ ನಂತಹ ಐಟಿ ಕಂಪನಿಗಳು, ಅಮೂಲ್ ಎಂಟಿಆರ್ ನಂತಹ ಆಹಾರ ಉತ್ಪಾದಕಾ ಕಂಪನಿಗಳು, ಸರ್ಕಾರೇತರ ಸಂಸ್ಥೆಗಳು, ಆಸ್ಪತೆಗಳು ಅವರದ್ದೇ ಆದ ಲೋಗೋಗಳನ್ನು ಹೊಂದಿದ್ದಾರೆ. ಲೋಗೋ ಎನ್ನುವಂಥದ್ದು ಒಂದು ಬ್ರಾಂಡ್ ನ್ನು ಸೃಷ್ಟಿಸಲು ಅತ್ಯಗತ್ಯವಾಗಿರುವಂಥದ್ದು, ಒಂದು ಲೋಗೊವನ್ನು ನೋಡಿದಾಕ್ಷಣ ಇದು ಇಂತದ್ದೇ ಕಂಪನಿ ಅಥವ ಇಂಥದ್ದೇ ವಸ್ತು, ರಾಜ್ಯ, ದೇಶಕ್ಕೆ ಸಂಬಂಧಪಟ್ಟಿದ್ದು ಎಂದು ಗುರುತಿಸಲು ಸಾಧ್ಯವಾಗುತ್ತದೆ. ಉದಾಹರಣೆಗೆ ಮಣಿಪಾಲದ ಮಾಹೆ ಸಂಸ್ಥೆಯ ಲೋಗೋವನ್ನು ನೋಡಿದಾಕ್ಷಣ ಅದು ವಿಶ್ವ ಮಟ್ಟದಲ್ಲಿ ಗುರುತಿಸಿರುವಂತಹ ಸಂಸ್ಥೆ ಎಂಬುದು ಗೊತ್ತಾಗುತ್ತದೆ.

ಲೋಗೋ ರೂಪಿಸುವುದಕ್ಕೂ ಅದನ್ನು ಬಳಸುವುದಕ್ಕೂ ಅದರದೇ ಆದ ನಿಯಮಗಳಿವೆ. ಲೋಗೋ ಅಥವ ಲಾಂಛನ, ಅದಕ್ಕೆ ಸಂಬಂಧಿಸಿದ ವ್ಯಾಪ್ತಿ, ಕೆಲಸ ಕಾರ್ಯ, ಗುರಿ ಉದ್ದೇಶಗಳನ್ನು ಪ್ರತಿನಿಧಿಸುವಂತಿರಬೇಕು. ಒಂದು ಸಂಸ್ಥೆಯ ಲೋಗೋ ರೂಪಿಸುವುದೂ ವಿವೇಚನೆಯಿಂದ ಮಾಡಬೇಕಾಗುತ್ತದೆ. ಒಂದು ಸಂಸ್ಥೆ ಅಥವ ಒಂದು ಉದ್ದೇಶಕ್ಕಾಗಿ ಬಳಸಿದ ಲೋಗೋವನ್ನು ಮತ್ತೊಬ್ಬರು ಬೇಕಾದಂತೆ ಬಳಸುವಂತಿಲ್ಲ. ಆ ಲೋಗೋ ಆ ಸಂಸ್ಥೆಯ. ಟ್ರೇಡ್ ಮಾರ್ಕ್ ಆಗಿರುತ್ತದೆ. ಕರ್ನಾಟಕ ಯಕ್ಷಗಾನ ಅಕಾಡೆಮಿಗೂ ಅದನ್ನು ಪ್ರತಿನಿಧಿಸುವ ಲೋಗೋವನ್ನು ನಾವು ಕಾಣಬಹುದು. ಸಾಮಾನ್ಯವಾಗಿ ದೇಶ ರಾಜ್ಯ ಹಾಗೂ ಸಾರ್ವಜನಿಕ ಕಾರ್ಯಕ್ರಮಗಳಿಗೆ, ಕಲೆ, ಸಾಹಿತ್ಯದ ಉದ್ದೇಶಗಳಿಗೆ ಸಂಬಂಧಿಸಿದ ಹಾಗೆ ಹೊಸ ಲೋಗೊವನ್ನು ರೂಪಿಸುವಾಗ ಸರ್ಕಾರ ವಿದ್ವಾಂಸರಿಗೆ, ಪರಿಣಿತರಿಗೆ, ಚಿಂತಕರಿಗೆ ಲೋಗೋ ರೂಪಿಸಲು ಆಹ್ವಾನ ನೀಡುವುದಿದೆ. ಹಾಗೆಯೇ ಈ ಬಾರಿ ನಮ್ಮ ರಾಜ್ಯಕ್ಕೆ ಕರ್ನಾಟಕ ಎಂಬುದಾಗಿ ಮರುನಾಮಕರಣಗೊಂಡು 50 ವರ್ಷ ಪೂರ್ಣಗೊಂಡ ಹಿನ್ನಲೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ "ಕರ್ನಾಟಕ ಸಂಭ್ರಮ–50 ಹೆಸರಾಯಿತು ಕರ್ನಾಟಕ, ಉಸಿರಾಗಲಿ ಕನ್ನಡ" ಎಂಬ ಶೀರ್ಷಿಕೆಯಡಿ ಸಂಭ್ರಮಾಚರಣೆ ನಡೆಸಲು ಸಿದ್ದತೆ ನಡೆಸಿದೆ. ಇದಕ್ಕಾಗಿ ಕನ್ನಡೆ ನಾಡು ನುಡಿ ಸಂಸ್ಕೃತಿಯನ್ನು ಬಿಂಬಿಸುವ ವಿಶಿಷ್ಟ ಲಾಂಛನವನ್ನು ರೂಪಿಸಲು ಮಾದರಿಗಳನ್ನು ಸಾರ್ವಜನಿಕರಿಂದ ಆಹ್ವಾನಿಸಿದೆ. ಆಯ್ಕೆಯಾದ ಲೋಗೋ ಮಾದರಿಗೆ ಸರ್ಕಾರದಿಂದ 25 ಸಾವಿರ ರುಪಾಯಿಗಳ ಬಹುಮಾನವೂ ಇದೆ. ಹೆಚ್ಚಿನ ಮಾಹಿತಿ ಕನ್ನಡ ಸಿರಿ ಕರ್ನಾಟಕ ಜಾಲತಾಣದಲ್ಲಿ ಲಭ್ಯವಿದೆ. ರಾಜ್ಯದ ಬೇರೆ ಬೇರೆ ಭಾಗಗಳಿಂದ ಸೃಜನಶೀಲರು ಲೋಗೋಗಳನ್ನು ಕಳುಹಿಸಿಕೊಡುತ್ತಾರೆ. ಆದರೆ ಸಂಸ್ಕೃತಿಯನ್ನು ಪ್ರತಿನಿಧಿಸುವ ಆ ಲಾಂಛನದಲ್ಲಿ ಕರಾವಳಿ ಕಲೆ ಯಕ್ಷಗಾನವೂ ರಾಜ್ಯ ಕಲೆಯಾಗಿ ಬಿಂಬಿಸಲ್ಪಡಲಿ ಎಂಬುದು ಆಶಯ.

***ನಾದ ನೂಪುರ ಯಕ್ಷೋತ್ಥಾನ ವಂಡಾರು ಇದರ ಲೋಗೋ ರೂಪುಗೊಂಡ ಬಗ್ಗೆ***

ಎನ್ ವೈಟಿ ವಂಡಾರು ಇದರ ಲೋಗೋದ ಹೊರ ವರ್ತುಲ ಗಾಢ ನೀಲಿ ಬಣ್ಣದಿಂದ ಕೂಡಿದ್ದು ಕಲೆಯ ಮೇಲಿರುವ ಅಗಾಧ ಪ್ರೀತಿಯನ್ನು ಸಂಕೇತಿಸುತ್ತದೆ.
ಒಳ ಮೈಯ್ಯ ಹಸಿರು ಬಣ್ಣ ಸಮೃದ್ಧಿ ಶ್ರೀಮಂತಿಕೆಯನ್ನು ಸಂಕೇತಿಸುತ್ತದೆ. ಯಕ್ಷಗಾನ ಎಂದಿಗೂ ಶ್ರೀಮಂತ ಕಲೆ, ಈ ಶ್ರೀಮಂತ ಕಲೆ ಎಂದಿಗೂ ಮಸುಕಾಗುವುದಿಲ್ಲ ಎಂಬ ಆಶಯವನ್ನು ಇದು ವ್ಯಕ್ತ ಪಡಿಸುತ್ತಿದೆ. ಇದರ ಮಧ್ಯೆ ಇರುವ ನಗುಮೊಗದ ಯಕ್ಷಗಾನದ ಸ್ತ್ರೀ ವೇಷ ಮಂಗಲಕರ ಕಲೆ ಎಂಬುದನ್ನು ಸಂಕೇತಿಸುತ್ತದೆ. ಹೆಣ್ಣನ್ನು ಮಂಗಲಕರ ಎಂದು ಪರಿಭಾವಿಸಿದ್ದಾರೆ. ಯಕ್ಷಗಾನವೂ ಸುಮಂಗಲಿಯಂತೆ ಮಂಗಲಕಾರಕ ಎಂಬ ಭಾವದಲ್ಲಿ ಕಡುಗೆಂಪು ವೇಷಭೂಷಣದ ಸಕಾರಾತ್ಮಕ ಭಾವವನ್ನು ಹೊಮ್ಮಿಸುವ ನಗುಮೊಗದ ಯಕ್ಷಗಾನದ ಸ್ತ್ರೀ ವೇಷ ಲೋಗೋದ ಚಿತ್ರಿಕೆಯಲ್ಲಿದೆ. ಲೋಗೋದ ರೂಪದರ್ಶಿ ಸಂಸ್ಥೆಯ ಸ್ಥಾಪಕಾಧ್ಯಕ್ಷ ಗೋವಿಂದ ವಂಡಾರು ಆಗಿದ್ದು, ಈ ಭಾವಚಿತ್ರವನ್ನು ಖ್ಯಾತ ಛಾಯಾಗ್ರಾಹಕ ***ಪ್ರವೀಣ್ ಪೆರ್ಡೂರು*** ಸೆರೆ ಹಿಡಿದಿದ್ದಾರೆ. ಈ ಲೋಗೋವನ್ನು ನಾನು ಹಾಗೂ ಸಂಸ್ಥೆಯ ಸ್ಥಾಪಕಾಧ್ಯಕ್ಷರು ಸಾಕಷ್ಟು ಚಿಂತನೆ ನಡೆಸಿ ಅಂತಿಮಗೊಳಿಸಿದ್ದೇವೆ. – ***ಶುಭಾಶಯ, ಸಂಪಾದಕರು***

# ಯಕ್ಷಗಾನದಲ್ಲಿ ಶಕ್ತಿ (ದೇವಿ) ಯ ಆರಾಧನೆ

**ಯ**ಕ್ಷಗಾನ ಸರ್ವಾಂಗ ಸಮೃದ್ಧ ಕಲೆ. ಪ್ರಪಂಚದ ಶ್ರೇಷ್ಠ ಕಲೆಗಳ ಸಾಲಿನಲ್ಲಿ ಯಕ್ಷಗಾನಕ್ಕೆ ಪ್ರಾಮುಖ್ಯತೆ ಸಿಗಬೇಕು ಎನ್ನುವಷ್ಟರ ಮಟ್ಟಿಗೆ ತನ್ನ ಶ್ರೇಷ್ಠತೆಯನ್ನು ಈ ಕಲೆ ಎತ್ತಿ ಹಿಡಿಯುತ್ತದೆ. ಬಯಲಾಟದ ಸ್ವರೂಪದಲ್ಲಿ ಆರಂಭವಾದ ಇದನ್ನು ಜಾನಪದ ಕಲೆ ಎಂದು ಹೇಳುತ್ತಾ ಬಂದವರದೆಷ್ಟೋ ಮಂದಿ. ಆದರೆ ಇದರಷ್ಟೇ ಸತ್ಯವೆಂದರೆ, ನಾಟ್ಯಶಾಸ್ತ್ರದ ಆಂಗಿಕ, ಆಹಾರ್ಯ, ವಾಚಿಕ, ಸಾತ್ವಿಕವೆನ್ನುವ ಅಂಗಗಳನ್ನು ಹೊಂದಿದ ಯಕ್ಷಗಾನ ಶಾಸ್ತ್ರೀಯ ನೆಲೆಗಟ್ಟಿನಲ್ಲೂ ಅಷ್ಟೇ ಗಟ್ಟಿಯಾಗಿದೆ. ಅರ್ಥಗರ್ಭಿತ ಪ್ರಸಂಗ ಸಾಹಿತ್ಯವಿದೆ, ಭಾಗವತರ ಗಾಯನವಿದೆ, ಚೆಂಡೆ–ಮದ್ದಳೆಗಳ ನುಡಿತವಿದೆ, ಕಲಾವಿದ ಅಭಿನಯವಿದೆ, ನಾಟ್ಯಸರಸ್ವತಿಯನ್ನು ಆರಾಧಿಸುವ ನಾಟ್ಯವಿದೆ, ಮಾತಿನ ಕಲೆಯಿದೆ, ಕಣ್ಮನ ತಣಿಸುವ ಆಹಾರ್ಯವಿದೆ, ಇನ್ನೇನು ಬೇಕು ಹೇಳಿ ಯಕ್ಷಗಾನವನ್ನು ಸಮೃದ್ಧ ಕಲೆ ಎನ್ನುವುದಕ್ಕೆ. ಯಕ್ಷಗಾನ ಹುಟ್ಟಿಕೊಂಡದ್ದು ಆರಾಧನಾ ಕಲೆಯಾಗಿ ಎನ್ನುವುದರಲ್ಲಿ ಎರಡು ಮಾತಿಲ್ಲ. ಕುಕ್ಕಿಲ ಕೃಷ್ಣ ಭಟ್ಟರು ಸಂಪಾದಿಸಿರುವ 'ಪಾರ್ತಿಸುಬ್ಬನ ಯಕ್ಷಗಾನಗಳು' ಕೃತಿಯ ಪೀಠಿಕಾ ಭಾಗದಲ್ಲಿ ಇದರ ಬಗ್ಗೆ ಉಲ್ಲೇಖ ಸಿಗುತ್ತದೆ: " ..ಇದು ಪೂರ್ವಪರಂಪರೆಯಂತೆ ನಡೆದುಬಂದಿರುವ ಆರಾಧನಾ ಸಂಪ್ರದಾಯವೆಂಬುದರಲ್ಲಿ ಸಂದೇಹ ಕಾಣುವುದಿಲ್ಲ. ಯಕ್ಷಗಾನವೆಂಬ ಹೆಸರು ಬಂದಿರುವುದಾದರೂ ಅದೇ ಅರ್ಥದಲ್ಲಿ ಎಂದು ನ್ಯಾಯವಾಗಿ ತಿಳಿಯಬಹುದು. 'ಯಕ್ಷ' ಶಬ್ದಕ್ಕೆ ಪೂಜೆ ಅಥವಾ ಆರಾಧನೆ ಎಂಬುದೇ ನಿಜವಾದ ಅರ್ಥ. (ಯಕ್ಷ – ಪೂಜಾಯಾಂ ಪಾಣಿನಿ; ಯಕ್ಷ್ -To honoyr Worship;Apte)'ಗಾನ' ಶಬ್ದಕ್ಕೆ ಹಾಡತಕ್ಕ ಪ್ರಬಂಧವೆಂಬ ಅರ್ಥ–ಭಾವಾರ್ಥದಲ್ಲಿ ಈ ಶಬ್ದಕ್ಕೆ 'ಹಾಡುವಿಕೆ' ಎಂಬ ಅರ್ಥವಾದರೆ, ಕರ್ಮಾರ್ಥದಲ್ಲಿ 'ಹಾಡಲಿಕ್ಕಿರುವ ಪ್ರಬಂಧ' ಎಂಬ ಅರ್ಥ." ಒಂದರ್ಥದಲ್ಲಿ ಯಕ್ಷಗಾನವನ್ನು ಭಕ್ತಿಚಳುವಳಿಯ ಸ್ವರೂಪ ಎಂದೂ ಕರೆಯಬಹುದು. ಏಕೆಂದರೆ, ಇಲ್ಲಿ ಯಕ್ಷಗಾನದ ಮೂಲಕ ನಡೆಯುವುದು ದೇವತಾರಾಧನೆ. ಡಾ. ಮೋಹನ ಕುಂಟಾರು ಅವರು ತಮ್ಮ ಕೃತಿ **'ಯಕ್ಷಗಾನ ಆಹಾರ್ಯ'**ದಲ್ಲಿ ಕರ್ನಾಟಕ ಯಕ್ಷಗಾನ ಪರಂಪರೆಯ ಬಗ್ಗೆ ಹೇಳುವಾಗ ಯಕ್ಷಗಾನದ ಧಾರ್ಮಿಕ ಪ್ರಭಾವದ ಬಗ್ಗೆ ಹೀಗೆ ಹೇಳುತ್ತಾರೆ; "ಯಕ್ಷಗಾನದ ಇತಿಹಾಸವನ್ನು ಅವಲೋಕಿಸಿದಾಗ ಈ ಕಲೆಯು ದೇವಾಲಯದ ಕಲೆಯಾಗಿ ಬೆಳೆದು ಬಂದಿರುವುದು ಗೋಚರಿಸುತ್ತದೆ. ದೇವಸ್ಥಾನಗಳ ಹೆಸರುಗಳಲ್ಲಿ ದೇವಸ್ಥಾನಗಳಿಂದಲೇ ಯಕ್ಷಗಾನ ಮೇಳಗಳು ತಿರುಗಾಟಕ್ಕೆ ಹೊರಡುವುದು, ದೇವರ ಸೇವೆಯೆಂದು ಜನರು ಹರಕೆಯ ಆಟಗಳನ್ನು ಆಡಿಸುವುದು, ಯಕ್ಷಗಾನ ಪ್ರದರ್ಶನಗಳಲ್ಲಿ ಧಾರ್ಮಿಕ, ಪೌರಾಣಿಕ, ಮಹಾಪುರುಷರ ಚರಿತ್ರೆಗಳನ್ನು ಬಿತ್ತರಿಸುವುದು, ಯಕ್ಷಗಾನ ಪೂರ್ವರಂಗದ ದೇವತಾಸ್ತುತಿ, ಚೌಕಿಪೂಜೆ, ಮೇಳದ ದೇವರು ಇವೆಲ್ಲ ಯಕ್ಷಗಾನದ ಧಾರ್ಮಿಕ ಮುಖಗಳಾಗಿವೆ."

***ಮೇಳಗಳು ಮತ್ತು ಕ್ಷೇತ್ರ ಮಹಾತ್ಮೆಗಳು:***

ಆರಾಧನಾ ನೆಲೆಗಟ್ಟಿನಿಂದಲೇ ಯಕ್ಷಗಾನ ಬಂದದ್ದು ಎನ್ನುವುದಕ್ಕೆ ಮತ್ತೊಂದು ಸಾಕ್ಷಿಯೆಂದರೆ, ದೇವಾಲಯಗಳ ಹೆಸರಿನಲ್ಲಿ ಆರಂಭಗೊಂಡ ಮೇಳಗಳು. ಆ ಮೇಳಗಳಿಂದ ನಡೆಯುವ ಹರಕೆ ರೂಪದ ಬಯಲಾಟಗಳು ಹರಕೆಯಾಟಗಳು ಎಂದೇ ಪ್ರಸಿದ್ಧಿ. ಆಯಾಯ ಕ್ಷೇತ್ರದ ದೇವರ ಸೇವೆಯಾಗಿ ಹೊರಡುವ ಮೇಳಗಳು ಕ್ಷೇತ್ರದ ಹೆಸರನ್ನು, ಪಾವಿತ್ರ್ಯತೆಯನ್ನು, ಮಹಾತ್ಮೆಯನ್ನು ಸಾರುತ್ತಾ ಹೋಗುತ್ತವೆ.

***ಕ್ಷೇತ್ರಗಳ ಹೆಸರಿನಲ್ಲಿ ಹೊರಟ ಕೆಲವು ಮೇಳಗಳ ಹೆಸರುಗಳು:***

ಕೂಡ್ಲು ಮೇಳ, ಕುಂಡಾವು ಮೇಳ, ಶ್ರೀ ದುರ್ಗಾಪರಮೇಶ್ವರಿ ದಶಾವತಾರ ಯಕ್ಷಗಾನ ಮಂಡಳಿ, ಕಟೀಲು, ಶ್ರೀ ಮಂಜುನಾಥೇಶ್ವರ ಕೃಪಾಪೋಷಿತ ಯಕ್ಷಗಾನ ಮಂಡಳಿ ಧರ್ಮಸ್ಥಳ, ಶ್ರೀ ಅನಂತಪದ್ಮನಾಭ ಕೃಪಾಪೋಷಿತ ಯಕ್ಷಗಾನ ಮಂಡಳಿ ಪೆರ್ಡೂರು, ಶ್ರೀ ಗುರುನರಸಿಂಹ ಕೃಪಾಪೋಷಿತ ಯಕ್ಷಗಾನ ಮಂಡಳಿ ಸಾಲಿಗ್ರಾಮ, ಶ್ರೀ ಇಡಗುಂಜಿ ಮಹಾಗಣಪತಿ ಯಕ್ಷಗಾನ ಮಂಡಳಿ ಕೆರೆಮನೆ, ಶ್ರೀ ದುರ್ಗಾಪರಮೇಶ್ವರಿ ದಶಾವತಾರ ಯಕ್ಷಗಾನ ಮಂಡಳಿ ಮಂದಾರ್ತಿ, ಸುಂಕದಕಟ್ಟೆ ಮೇಳ, ಸಿಗಂದೂರು ಮೇಳ. ಕಮಲಶಿಲೆ ಮೇಳ, ಅಮೃತೇಶ್ವರಿ ಮೇಳ, ತಲಕಳ ಮೇಳ, ಉಳ್ಳಾಲ ಮೇಳ, ಸಸಿಹಿತ್ಲು ಮೇಳ, ಬಪ್ಪನಾಡು ಮೇಳ, ಹನುಮಗಿರಿ ಮೇಳ, ಪಾವಂಜೆ ಮೇಳ, ಸೌಕೂರು ಮೇಳ, ಮಾರಣಕಟ್ಟೆ ಮೇಳ ಇತ್ಯಾದಿ.



***ಈ ಮೇಳಗಳ ಹೆಸರಿನ ಕ್ಷೇತ್ರ ಮಹಾತ್ಮೆಗಳು :***

ಕಟೀಲು ಕ್ಷೇತ್ರ ಮಹಾತ್ಮೆ, ಧರ್ಮಸ್ಥಳ ಕ್ಷೇತ್ರ ಮಹಾತ್ಮೆ, ಮಂದಾರ್ತಿ ಕ್ಷೇತ್ರ ಮಹಾತ್ಮೆ, ಬಪ್ಪನಾಡು ಕೇತ್ರ ಮಹಾತ್ಮೆ, ಸಸಿಹಿತ್ಲು ಕ್ಷೇತ್ರ ಮಹಾತ್ಮೆ ಇತ್ಯಾದಿ ಕ್ಷೇತ್ರಮಹಾತ್ಮೆಗಳು ಆಯಾಯ ಕ್ಷೇತ್ರಗಳ ಮೇಳಗಳಲ್ಲಿ ಪ್ರದರ್ಶನಗೊಳ್ಳುತ್ತವೆ.

***ದೇವೀ ಮಹಾತ್ಮೆ:*** ಯಕ್ಷಗಾನ ಪ್ರಸಂಗ ಸಾಹಿತ್ಯವನ್ನು ಗಮನಿಸಿದಾಗ ಯಕ್ಷಗಾನದ ಧಾರ್ಮಿಕ ಹಿನ್ನೆಲೆ ಎಂತಹದ್ದು, ಇದು ಆರಾಧನಾ ಪರಂಪರೆ ಎನ್ನುವುದರಲ್ಲಿ ಸಂದೇಹ ಬರುವುದೇ ಇಲ್ಲ. **'ದೇವೀ ಮಹಾತ್ಮೆ'** ಪ್ರಸಂಗ ಒಂದೇ ಸಾಕು ಯಕ್ಷಗಾನದ ಧಾರ್ಮಿಕತೆಯನ್ನು, ಆರಾಧನಾ ಸ್ವರೂಪವನ್ನು ಅರ್ಥವಿಸಿಕೊಳ್ಳುವುದಕ್ಕೆ.

ಡಾ. ಕಬ್ಬಿನಾಲೆ ವಸಂತ ಭಾರಧ್ವಾಜರ **'ಯಕ್ಷಗಾನ ಸಾಹಿತ್ಯ ಚರಿತ್ರೆ'** ಎಂಬ ಕೃತಿಯಲ್ಲಿ ಈ ಕುರಿತು ಮಾಹಿತಿ ಸಿಗುತ್ತದೆ. ಈ ಕೃತಿಯಲ್ಲಿ 'ಪಡುವಲಪಾಯ ಪ್ರಸಂಗ ಸಾಹಿತ್ಯ ಎಂಬ ಭಾಗದಲ್ಲಿ ಯಕ್ಷಗಾನ ಸಾಹಿತ್ಯಗಳ ಬಗೆಗೆ ವಿಚಾರಗಳಿವೆ: "ಯಕ್ಷಗಾನದಲ್ಲಿ ರಾಮಾಯಣ, ಮಹಾಭಾರತ, ಭಾಗವತಗಳಲ್ಲದೇ ಇತರ ಪುರಾಣಗಳಿಂದ ಆಯ್ದ ನೂರಾರು ಪ್ರಸಂಗಗಳಿವೆ. ಮಾರ್ಕಂಡೇಯ, ಶಿವ, ವಿಷ್ಣು, ಸ್ಕಂದ, ದೇವೀಭಾಗವತ, ಹರಿವಂಶ ಪುರಾಣಗಳಲ್ಲದೇ ಶ್ರೀಕೃಷ್ಣ ಬೋಧಾಮೃತ, ಬೃಹತ್ಕಥಾ ಮಂಜರಿ ಮುಂತಾದ ಮೂಲಗಳಿಂದ ಕಥೆಗಳನ್ನು ಸ್ವೀಕರಿಸಿ, ಯಕ್ಷಗಾನಕ್ಕೆ ಒಪ್ಪುವಂತೆ ಪ್ರಸಂಗಗಳನ್ನು




ರಚಿಸಲಾಗಿದೆ. ಇವುಗಳಲ್ಲಿ ಬಹಳ ಮುಖ್ಯವಾದುದು ಮಾರ್ಕಂಡೇಯ ಪುರಾಣದ **'ದೇವೀ ಮಹಾತ್ಮೆ'**. ಇದನನು ರಚಿಸಿದವನು ದೇವಿದಾಸ (1800) ಕವಿ. ಏಳು ರಾತ್ರಿಗಳಲ್ಲಿ ಪ್ರದರ್ಶನಗೊಳ್ಳುತ್ತಿದ್ದ ಈ ಪ್ರಸಂಗದಲ್ಲಿ ಮಧು–ಕೈಟಭ ವಧೆ, ಮಹಿಷಾಸುರ ವಧೆ, ಧೂಮ್ರಾಕ್ಷ ವಧೆ, ಚಂಡಮುಂಡ–ರಕ್ತಬೀಜ ವಧೆ, ಶುಂಭವಧೆ ಎಂಬ ಅಧ್ಯಾಯಗಳಿವೆ." ಎನ್ನುತ್ತಾರೆ ಕಬ್ಬಿನಾಲೆ ವಸಂತ ಭಾರಧ್ವಾಜರು. ಈ ***'ದೇವಿ ಮಹಾತ್ಮೆ'*** ಪ್ರಸಂಗವನ್ನು ಒಂದು ರಾತ್ರಿಯಲ್ಲಿ ಪ್ರದರ್ಶಿಸುವುದಕ್ಕೆ ಅನುಕೂಲವಾಗುವ ಹಾಗೆ ಹಿರಿಯ ಬಲಿಪ ನಾರಾಯಣ ಭಾಗವತರು ಹಾಗೂ ಅಗರಿ ಶ್ರೀನಿವಾಸ ಭಾಗವತರು ಮರು ರಚಿಸಿದ್ದಾರೆ. ಈ ಪ್ರಸಂಗ ಜನರ ಮನದಲ್ಲಿ ಅಚ್ಚೊತ್ತಿದ್ದಷ್ಟು ಬೇರಾವ ಪ್ರಸಂಗವೂ ಅಚ್ಚೊತ್ತಿರಲಿಕ್ಕಿಲ್ಲ. ವರುಷವೊಂದಕ್ಕೆ ಕಟೀಲು ಮೇಳವೊಂದರಲ್ಲೇ ಸರಿಸುಮಾರು 650ಕ್ಕೆ ಹತ್ತಿರ ಹತ್ತಿರ ಪ್ರದರ್ಶನ ಕಾಣುವ ಈ ಪ್ರಸಂಗ ತೆಂಕು–ಬಡಗಿನ ಮೇಳಗಳು, ಹವ್ಯಾಸಿ ತಂಡಗಳು ಎಲ್ಲವೂ ಸೇರಿದಾಗ ವರುಷವೊಂದರ ಪ್ರದರ್ಶನವೇ 1000ವನ್ನು ತಲುಪಬಹುದು. ಇಷ್ಟು ಜನಮಾನಸವನ್ನು ತಟ್ಟಿದ ಪ್ರಸಂಗ ಬೇರೊಂದು ಇರಲಿಕ್ಕಿಲ್ಲ. ಈ ಪ್ರಸಂಗವನ್ನು ಬೇರೆ ಕವಿಗಳು ಕೂಡ ಹೊಸದಾಗಿ ರಚಿಸುವುದಕ್ಕೆ ಪ್ರಯತ್ನಿಸಿದ್ದಾರೆ. ಆದರೆ ಅದರ ಬಗ್ಗೆ ನಿಖರ ಮಾಹಿತಿ ಇಲ್ಲ.

***ವಿಶೇಷ ಉತ್ಸವಗಳಲ್ಲಿ ಯಕ್ಷಗಾನಾರಾಧನೆ:***

ಧಾರ್ಮಿಕ ಉತ್ಸವಗಳಲ್ಲಿ ನಡೆಯುವ ಯಕ್ಷಗಾನಾರಾಧನೆ ಯಕ್ಷಗಾನ ಆರಾಧನಾ ಸ್ವರೂಪದ್ದು ಎನ್ನುವುದಕ್ಕೆ ಇನ್ನೊಂದು ಉದಾಹರಣೆ. ಕ್ಷೇತ್ರಗಳ ವರ್ಷಾವಧಿ ಉತ್ಸವಗಳಿರಬಹುದು, ಅಥವಾ ಬೇರೆ ಯಾವುದೇ ವಿಶೇಷತೆಗಳಿರಬಹುದು ಯಕ್ಷಗಾನ ಸೇವೆ ನಡೆಯುತ್ತದೆ. ಶಿವರಾತ್ರಿ, ಯುಗಾದಿ, ಲಕ್ಷದೀಪೋತ್ಸವ, ಜಾತ್ರೋತ್ಸವಗಳಲ್ಲಿ ನಮ್ಮ ಕರಾವಳಿ ಪ್ರದೇಶಗಳಲ್ಲಿ ಯಕ್ಷಗಾನಸೇವೆ ಇರದಿದ್ದರೆ ಅದು ಅಪೂರ್ಣವೆಂದೇ ಲೆಕ್ಕ ಎನ್ನುವಷ್ಟರ ಮಟ್ಟಿಗೆ ಯಕ್ಷಗಾನ ಹಾಸುಹೊಕ್ಕಾಗಿದೆ.

***ನವರಾತ್ರಿ:*** ನವರಾತ್ರಿಯಲ್ಲಿ ನಡೆಯುವ ಯಕ್ಷಗಾನಾರಾಧನೆ ಬಹಳ ವಿಶೇಷವಾದದ್ದು. ದೇವಿ ಕ್ಷೇತ್ರಗಳಲ್ಲಿ ವಿಶೇಷವಾಗಿ ನವರಾತ್ರಿಯ ಸಮಯದಲ್ಲಿ ಯಕ್ಷಗಾನ ದೇವರ ಪ್ರೀತ್ಯರ್ಥವಾಗಿ ನಡೆಯುತ್ತದೆ. ಕಟೀಲು, ಸುರತ್ಕಲ್ ಮಾರಿಗುಡಿ, ಕೊಲ್ಲಂಗಾನ, ಪೊಳಲಿ, ಉಡುಪಿ ಪುತ್ತೂರು, ಕಾಸರಗೋಡಿನ ಕೆಲವು ಕ್ಷೇತ್ರಗಳು, ಮುಂತಾದೆಡೆಗಳಲ್ಲಿ ತಾಳಮದ್ದಳೆಯೋ, ಯಕ್ಷಗಾನವೋ ಒಂದಿಲ್ಲೊಂದು ರೂಪದಲ್ಲಿ ಯಕ್ಷಗಾನ ಸೇವೆ ದೇವಿಗೆ ನಡೆಯುತ್ತದೆ. ಹೀಗೆ ಯಕ್ಷಗಾನವೆನ್ನುವುದು ಒಂದು ಆರಾಧನಾ ಕಲೆಯಾಗಿ ಕರಾವಳಿ ಪ್ರದೇಶಲ್ಲಿ ಉಳಿದುಕೊಂಡಿದೆ. ಅದರೊಂದಿಗೆ ಬೆಳೆಯುತ್ತಿದೆ. ಅನೇಕರನ್ನು ತಲುಪುತ್ತಿದೆ ಎನ್ನಬಹುದು.

***ಲೇಖಕರು– ಸಾಯಿ ಸುಮಾ ಎಂ ನಾವುಡ***

---

## ಇತಿಹಾಸದ ಪುಟಗಳಲ್ಲಿ ದುರಂತ ಕಂಡ ಬೆಳ್ಮಣ್ಣು ಮೇಳ –ಮೇಳ ದರ್ಪಣ ಸಂಚಿಕೆ–೦೫

**ಬೆ**ಳ್ಮಣ್ಣು ಶ್ರೀ ದುರ್ಗಾಪರಮೇಶ್ವರಿ ಯಕ್ಷಗಾನ ಮಂಡಳಿಯು ಯಕ್ಷಗಾನ ಇತಿಹಾಸದಲ್ಲಿ ವಿಷಾದದ ದಾಖಲೆ ಬರೆದ ಮೇಳ. ಒಂದರ್ಥದಲ್ಲಿ, ದುರಂತದಲ್ಲಿ ಅಂತ್ಯ ಕಂಡ ಮೇಳ ಎನ್ನಬಹುದು. ಬಹುಶಃ ಯಕ್ಷಗಾನ ಡೇರೆ ಮೇಳಗಳ ಇತಿಹಾಸದಲ್ಲಿ ಅತ್ಯಂತ ಸಣ್ಣ ತಿರುಗಾಟದಲ್ಲೇ ಮೇಳವು ಕೊನೆಗಂಡ ದಾಖಲೆ ಬೆಳ್ಮಣ್ಣು ಮೇಳದ್ದೇ ಇರಬಹುದು. ತಿರುಗಾಟ ನಡೆಸಿದ ಪ್ರಥಮ ವರ್ಷದಲ್ಲೇ ದುರಂತಕ್ಕೊಳಗಾಗಿ ಬೆಳ್ಮಣ್ಣು ಮೇಳ ಕೊನೆಗೊಂಡುದು ವಿಷಾದನೀಯ.

ಬೆಳ್ಮಣ್ಣು ಮೇಳದ ಸ್ಥಾಪಕರಾದ ಬೆಳ್ಮಣ್ಣು ಶೇಖರ ವಿ.ಶೆಟ್ಟಿಯವರು ಮುಂಬೈಯಲ್ಲಿ, ಪ್ರತಿಷ್ಠಿತ C.A ಪದವಿ ಪೂರೈಸಿ ಚಾರ್ಟರ್ಡ್ ಎಕೌಂಟೆಂಟ್ ಆಗಿ ಉನ್ನತ ಉದ್ಯೋಗದಲ್ಲಿದ್ದರು. ಶೇಖರ ಶೆಟ್ಟರು ಅಜಾನುಬಾಹು ಶರೀರದೊಂದಿಗೆ, ಆಕರ್ಷಕ ಗುಂಗುರು ಕೂದಲನ್ನು ಹೊಂದಿರುವ ಸಜ್ಜನ ವ್ಯಕ್ತಿ. ಅವರಿಗೆ ಯಕ್ಷಗಾನದತ್ತ ಅಪಾರ ಪ್ರೇಮ, ಒಲವು ಬಾಲ್ಯದಲ್ಲೇ ಇದ್ದ ಕಾರಣ, ದೂರದ ಮುಂಬೈನಲ್ಲಿದ್ದರೂ, ಯಕ್ಷಗಾನೀಯ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದರು. ಹಲವಾರು ಯಕ್ಷಗಾನ ಪ್ರಸಂಗ ರಚಿಸಿದ್ದಲ್ಲದೇ, ಮುಂಬೈನ ಪ್ರಸಿದ್ಧ ಗೀತಾಂಬಿಕ ಯಕ್ಷಗಾನ ಮಂಡಳಿ ಹಾಗೂ ಶ್ರೀ ದುರ್ಗಾಪರಮೇಶ್ವರಿ ಯಕ್ಷಗಾನ ಮಂಡಳಿಯಲ್ಲಿ ವೇಷವನ್ನೂ ಮಾಡುತ್ತಿದ್ದರು. ನಂತರದಲ್ಲಿ ತಾವೇ ಮೇಳ ಹೊರಡಿಸುವ ಯೋಜನೆ ಹೊಂದಿ, 1984ರಲ್ಲಿ, ಸ್ಥಗಿತಗೊಂಡ, ಬಪ್ಪನಾಡು ಮೇಳವನ್ನು ಮಗದೊಮ್ಮೆ ಭರ್ಜರಿಯಾಗಿ ಹೊರಡಿಸಿದರು. ಮಲ್ಪೆ ರಾಮದಾಸ ಸಾಮಗ, ಕೊಳ್ಯೂರು ರಾಮಚಂದ್ರ ರಾವ್, ಪೆರುವಾಯಿ ನಾರಾಯಣ ಶೆಟ್ಟಿ, ಕುಬಣೂರು ಶ್ರೀಧರ್ ರಾವ್, ಸಿದ್ದಕಟ್ಟೆ ಕೊರಗದಾಸ್, ಸರಪಾಡಿ ಅಶೋಕ ಶೆಟ್ಟಿ, ರಾಧಾಕೃಷ್ಣ ನಾವುಡ, ತಾರಾನಾಥ ವರ್ಕಾಡಿ, ಮಾಡಾವು ಕೊರಗಪ್ಪ ರೈ ಮುಂತಾದ ಯಕ್ಷಗಾನ ಘಟಾನುಘಟಿಗಳ ಗಡಣವನ್ನೇ ಹೊಂದಿ ಬಪ್ಪನಾಡು ಮೇಳ ಅಪಾರ ಜನಪ್ರಿಯತೆ ಗಳಿಸಿತು. ಶೆಟ್ಟರೇ ರಚಿಸಿದ "ಬಂಗಾರ್ದ ತೊಟ್ಟಿಲ್" ಪ್ರಸಂಗ ಯಶಸ್ವಿಯಾಗಿತ್ತು. ಎರಡು ವರ್ಷಗಳ ನಂತರ, ಏನೋ ಸಮಸ್ಯೆ ಇದ್ದಿರಬೇಕು. ಬಪ್ಪನಾಡು ಮೇಳವನ್ನು ತೊರೆದು, ತಮ್ಮದೇ ಊರಿನ ಬೆಳ್ಮಣ್ಣು ಮೇಳವನ್ನು ಸುಸಜ್ಜಿತವಾಗಿ ಹೊರಡಿಸಲು ಯೋಚಿಸಿ, ನವೆಂಬರ್ 7, 1986ರಂದು ಹೊಸ ಬೆಳ್ಮಣ್ಣು ಮೇಳದ ತಿರುಗಾಟ ಆರಂಭಿಸಿದರು. ಶೇಖರ ಶೆಟ್ಟರು ಬೆಳ್ಮಣ್ಣು ಮೇಳವನ್ನು ಸುಸಜ್ಜಿತವಾಗಿಯೇ ಪ್ರಾರಂಭಿಸಿದರು. 07.11.1986ರಂದು ಪ್ರಥಮ ಸೇವೆಯಾಟ ಮಾಡಿ ಹೊಸ ಡೇರೆ, ಹೊಸ ರಂಗಸ್ಥಳ, ವಾಹನ ಸೌಕರ್ಯ, ಉತ್ತಮ ಕಲಾವಿದರ ಸಂಯೋಜನೆಯೊಂದಿಗೆ ಉತ್ತಮ ಪ್ರಸಂಗವನ್ನೂ ಪ್ರದರ್ಶಿಸಿದರು. ಶೇಖರ ಶೆಟ್ಟರಿಗೆ ಯಕ್ಷಗಾನ ಪ್ರೇಕ್ಷಕರನ್ನು ಆಕರ್ಷಿಸುವ ಅದ್ಭುತ ಕಲೆ ಕರಗತವಾಗಿತ್ತು. ಬೆಳ್ಮಣ್ಣು ಮೇಳ ಹೊರಡುವ ಮೊದಲೇ, ಶೇಖರ ಶೆಟ್ಟರ ಪ್ರಚಾರ ಶೈಲಿಯು ಅಂದಿನ ಕಾಲದಲ್ಲಿ ಸಂಚಲನ ಮೂಡಿಸಿತ್ತು. ಉದಯವಾಣಿ ಹಾಗೂ ಇನ್ನಿತರ ಕರಾವಳಿಯ ಪತ್ರಿಕೆಗಳಲ್ಲಿ ದಿನಂಪ್ರತಿ "ಬೆಳ್ಮಣ್ಣು ಮೇಳ, ಬೆಳ್ಮಣ್ಣು ಮೇಳ, ಬೆಳ್ಮಣ್ಣು ಮೇಳ" ಶೀರ್ಷಿಕೆಯಲ್ಲಿ ಜಾಹೀರಾತು ನೀಡಿ, ಯಕ್ಷಗಾನ ಅಭಿಮಾನಿಗಳಲ್ಲಿ ಕುತೂಹಲ ಮೂಡಿಸಲು ಯಶಸ್ವಿಯಾಗಿದ್ದರು. ಅಂದಿನ ತಿರುಗಾಟದಲ್ಲಿ ಮರವಂತೆ ನರಸಿಂಹದಾಸ್, ಮೋಹನ ಬೈಪಡಿತ್ತಾಯ, ಅಡೂರು ಮೋಹನ ಸರಳಾಯ, ಸರಪಾಡಿ ಅಶೋಕ ಶೆಟ್ಟಿ, ಮಾಡಾವು ಕೊರಗಪ್ಪ ರೈ, ಪದ್ಮನಾಭ ರೈ, ಆನೆಕಲ್ಲು ಗಣಪತಿ ಭಟ್,



ಶೇಖರ್ ವಿ. ಶೆಟ್ಟಿ, ಬೆಳ್ಮಣ್

ದಾಸಪ್ಪ ಗೌಡ, ಬೆಳ್ಮಣ್ಣು ಹರಿದಾಸ ಉಡುಪ, ಸ್ತ್ರೀ ಪಾತ್ರದಲ್ಲಿ ಮಂಬೈನ ಶ್ರೀನಿವಾಸ ಶೆಟ್ಟಿ, ಉಮೇಶ್ ಶೆಟ್ಟಿ, ಪೊಳಲಿ ಲೋಕಯ್ಯ, ಪರಮೇಶ್ವರ ಆಚಾರ್ಯ ಇದ್ದರು. ಶಂಕರ್ ಶೆಟ್ಟಿ ಮುಂಬೈ, ಕಾರ್ಕಳ ನಾರಾಯಣ ಶೆಟ್ಟಿ, ಅಪ್ಪುಕುಂಞ ಯಾದವ, ಸರಪಾಡಿ ವಿಠಲ ಶೆಟ್ಟಿ, ಬಾಲಕೃಷ್ಣ ಮಣಿಯಾಣಿ, ಶ್ರೀನಿವಾಸ ಹಾಸ್ಯಗಾರ, ಮಹಾಬಲೇಶ್ವರ ಭಟ್, ಸಜಿಪ ಮೋನಪ್ಪ ಶೆಟ್ಟಿ, ಕೇಶವ ಶೆಟ್ಟಿಗಾರ್, ಕುಂಬಳೆ ಫಿಲಿಫ್ ಡಿಸೋಜ, ಮುಂತಾದ ಕಲಾವಿದರಿದ್ದರು. ವಿಶೇಷ ಆಕರ್ಷಣೆಯಾಗಿ ಬೆಂಗಳೂರಿನ ಕು. ರಾಜೇಶ್ವರಿ ಹಾಗೂ ಕು.ವಸಂತಿಯವರ ಭರತ ನಾಟ್ಯ, ಮಹಿಳಾ ಭಾಗವತರಾಗಿ ಕು.ಮೋಹಿನಿ ಭಟ್, ಮದ್ದಲೆ ವಾದಕರಾಗಿ ಕು.ವಿಜಯಾ ಭಟ್(ಇವರೀರ್ವರೂ ಆನೆಕಲ್ಲು ಗಣಪತಿ ಭಟ್ಟರ ಸೋದರಿಯರು) ಪೂರ್ಣಾವಧಿಯಲ್ಲಿ ಕಲಾವಿದರಾಗಿದ್ದರು. ಪೊಲ್ಯ ಲಕ್ಷ್ಮೀನಾರಾಯಣ ಶೆಟ್ಟಿ ಹಾಗೂ ಸುರೇಂದ್ರ ಪಣಿಯೂರರು ಅತಿಥಿ ಭಾಗವತರಾಗಿಯೂ ಭಾಗವಹಿಸಿದ್ದರು. ಶೆಟ್ಟರು ಕಲಾವಿದರಿಗೆ ಮಾಮೂಲಿಗಿಂತಲೂ ಹೆಚ್ಚಿನದ್ದೇ ಆದ ಸಂಭಾವನೆ ನೀಡಿದ್ದರು ಎಂದು ಅಂದು ಬೆಳ್ಮಣ್ಣು ಮೇಳದಲ್ಲಿ ತಿರುಗಾಟ ನಡೆಸಿದ ಸರಪಾಡಿ ಅಶೋಕ ಶೆಟ್ಟರು ಇಂದಿಗೂ ನೆನಪಿಸುತ್ತಿದ್ದಾರೆ. ಆ ತಿರುಗಾಟದ ಪ್ರಧಾನ ಪ್ರಸಂಗ ಶೇಖರ ಶೆಟ್ಟರೇ ರಚಿಸಿದ "ಮಾಮಿ ಪದ್ದಕ್ಕೆ". ಈ ಪ್ರಸಂಗವು ಶೇಖರ ಶೆಟ್ಟರದ್ದೇ ಕಥೆಯನ್ನು ಹೊಂದಿರುವ ಪ್ರಸಂಗ ಎಂಬುದಾಗಿ ಅಂದಿನ ಕಾಲದಲ್ಲಿ ವದಂತಿಯಿತ್ತು. ಕಥಾನಾಯಕನ ಹೆಸರೂ ಚಂದ್ರಶೇಖರ ಎಂಬುದಾಗಿದ್ದು, ಈ ಪಾತ್ರವನ್ನು ಶೇಖರ ಶೆಟ್ಟರೇ ನಿರ್ವಹಿಸುತ್ತಿದ್ದರು. ಈ ಪ್ರಸಂಗವು ಅಂದು ಯಶಸ್ವಿಯಾಗಿ ಪ್ರದರ್ಶನ ನೀಡಿತ್ತು. ಹಲವಾರು ಕಡೆಗಳಲ್ಲಿ ತುಂಬಿದ ಡೇರೆಯೊಂದಿಗೆ ಪ್ರದರ್ಶನ ಕಂಡು, ಶತಕ ಬಾರಿಸಿದ ದಾಖಲೆಯನ್ನು ನಿರ್ಮಿಸಿತು. ಕಾಂತು ಕಬೇದಿ, ರಕ್ಷಾಬಂಧನ, ಮುತ್ತೈದಿ ನಾಗೆತ್ತಿ ಪ್ರಸಂಗಳೂ ಇದ್ದವು.

ಆದರೆ, ತಿರುಗಾಟ ಮುಗಿಯಲು 5 ದಿನಗಳಷ್ಟೇ ಉಳಿದಿರುವ ಸಂದರ್ಭದಲ್ಲಿ (22.05.1987 ರಂದು ಮೇಳದ ಕೊನೆಯ ಸೇವೆಯಾಟ ಎಂದು ಶೇಖರ ಶೆಟ್ಟರು ನನ್ನಲ್ಲಿ ತಿಳಿಸಿದ್ದರು) ಬೆಳ್ಮಣ್ಣು ಮೇಳವು ಅತ್ಯಂತ ದಾರುಣವಾದ ಘಟನೆಗೊಳಗಾಯಿತು. ಅಂದು 17.05.1987ರ ದಿನಾಂಕ, ಬೆಳ್ಮಣ್ಣು ಮೇಳಕ್ಕೆ ಕರಾಳ ದಿನವಾಗಿ ಕಾಡಿತು. ಅಂದು ಮಂಗಳೂರು ಉರ್ವಸ್ಟೋರ್ ನಲ್ಲಿ ಪ್ರದರ್ಶನ ನೀಡಬೇಕಾಗಿತ್ತು. ಅಂದಿನ ಪ್ರದರ್ಶನದಲ್ಲಿ ಶೇಖರ ಶೆಟ್ಟರಿಗೆ ಸಂಘಟಕರಿಂದ ಹಾಗೂ ಅಭಿಮಾನಿಗಳಿಂದ ಸಂಮಾನವೂ ಜರುಗಲಿತ್ತು. ಮೊದಲ ದಿನ ಕಾರ್ಕಳ ಸಮೀಪದ ಸಾಣೂರಿನಲ್ಲಿ ಯಶಸ್ವಿಯಾಗಿ ಪ್ರದರ್ಶನ ಮುಗಿಸಿ ಕಲಾವಿದರೆಲ್ಲರೂ ಮೇಳದ ಟೆಂಪೋದಲ್ಲಿ ಕುಳಿತು ಮಂಗಳೂರಿನ ಕಡೆ ಸಾಗಿದರು. ವಾಹನ ಚಾಲಕರಾಗಿ ಸ್ವತಃ ಶೇಖರ ಶೆಟ್ಟರೇ ಇದ್ದರು. (ಸಾಮಾನ್ಯವಾಗಿ ಶೇಖರ ಶೆಟ್ಟರೇ ವಾಹನ ಚಲಾಯಿಸುತ್ತಿದ್ದರು) ಮೂಡುಬಿದಿರೆಯಲ್ಲಿ ಟೆಂಪೋ ನಿಲ್ಲಿಸಿ, ಹೊಟೇಲ್ ನಲ್ಲಿ ಎಲ್ಲರೂ ಕಾಫಿ ತಿಂಡಿ ಮುಗಿಸಿ ಮುಂದೆ ಸಾಗಿದರು. ನಂತೂರ್ ಕ್ರಾಸ್ ನಿಂದ ಉರ್ವಸ್ಟೋರ್ ಗೆ ವಾಹನ ಸಾಗುತ್ತಿತ್ತು. ಕೆಪಿಟಿ ಕಾಲೇಜು ದಾಟಿ ಮುಂದೆ ಸಾಗುತ್ತಿರುವಾಗ, ದುರ್ವಿಧಿಯೋ ಏನೋ, ದೊಡ್ಡ ದುರಂತವೇ ನಡೆದು ಹೋಯಿತು. ವಾಹನವು ಸುಮಾರು 60 ಅಡಿಗಳ ಪ್ರಪಾತಕ್ಕೆ ಬಿತ್ತು. ಕೂಡಲೇ, ಸನಿಹದಲ್ಲಿ ಇದ್ದವರು ಸೇರಿ, ಎಲ್ಲಾ ಕಲಾವಿದರನ್ನು ಮೇಲಕ್ಕೆ ತರಲು ಸಹಕರಿಸಿದರು. ಎಲ್ಲಾ ಕಲಾವಿದರನ್ನೂ ಮಂಗಳೂರಿನ ವೆನ್ಲಾಕ್ ಆಸ್ಪತ್ರೆಗೆ ದಾಖಲಿಸಿದರು. ಶೇಖರ ಶೆಟ್ಟರು, ಪ್ರಜ್ಞಾಹೀನರಾಗಿ ಗಂಭೀರವಾದ ಸ್ಥಿತಿಯಲ್ಲಿದ್ದರು. ನಂತರ ಅವರನ್ನು ಮಂಗಳೂರು ನರ್ಸಿಂಗ್ ಹೋಂ ಆಸ್ಪತ್ರೆಗೆ ದಾಖಲಿಸಿದರೂ, ಮರುದಿನ ಮುಂಜಾನೆ ಅಸುನೀಗಿದರು. ನಂತರದಲ್ಲಿ, ಇನ್ನೂ ಇಬ್ಬರು ನಿಧನರಾದರು. ಎಲ್ಲಾ ಕಲಾವಿದರಿಗೂ ಗಂಭಿರವಾದ ಗಾಯಗಳಾಗಿತ್ತು. ಅಂದು ಬೆಳ್ಮಣ್ಣು ಮೇಳದ ಭಾಗವತರಾಗಿದ್ದ, ಇದೀಗ, ಯಕ್ಷಗುರುಗಳಾಗಿರುವ ಮೋಹನ ಬೈಪಡಿತ್ತಾಯರು ಮೂರು ವರ್ಷಗಳ ಕಾಲ ಮಲಗಿದ್ದಲ್ಲೇ ಇದ್ದವರು, ಇಂದಿಗೂ, ಕಾಲಿಗೆ ಆದ ಗಂಭೀರ ಪೆಟ್ಟಿನಿಂದಾಗಿ ಕುಳಿತುಕೊಳ್ಳಲು ಆಗದ ಸ್ಥಿತಿಯಲ್ಲೇ ಇದ್ದಾರೆ. ಅಂದು, ವಾಹನದಲ್ಲಿ ಇದ್ದ ಕಲಾವಿದರಲ್ಲಿ ಆನೆಕಲ್ಲು ಗಣಪತಿ ಭಟ್, ಸರಪಾಡಿ ಅಶೋಕ ಶೆಟ್ಟಿ, ಮಾಡಾವು ಕೊರಗಪ್ಪ ರೈ, ಅಪ್ಪುಕುಂಞ ಯಾದವ, ಬಾಲಕೃಷ್ಣ ಮಣಿಯಾಣಿ ಹಾಗೂ ಸರಪಾಡಿ ವಿಠ್ಠಲ ಶೆಟ್ಟಿ ಹೊರತು ಪಡಿಸಿದರೆ, ಉಳಿದವರೆಲ್ಲರೂ ಯಕ್ಷಗಾನದ ತಿರುಗಾಟದಿಂದ ವಿಮುಖರಾಗಿದ್ದಾರೆ ಎಂಬುದು ಅತ್ಯಂತ ಬೇಸರದ ವಿಷಯ. ಬೆಳ್ಮಣ್ಣು ಮೇಳವು ಅಪಘಾತವಾದ ಸಂದರ್ಭದಲ್ಲಿ ನಾನು ಮಂಗಳೂರಿನಲ್ಲಿ ಉದ್ಯೋಗದಲ್ಲಿದ್ದೆ . ಬೆಳ್ಮಣ್ಣು ಶೇಖರ ಶೆಟ್ಟರು ನನ್ನಲ್ಲಿ ತುಂಬಾ ಆತ್ಮೀಯತೆ ಹೊಂದಿದ್ದರು. ಅಜಾನುಬಾಹು ಶರೀರದವರಾದರೂ, ಸರಳ, ಸಜ್ಜನಿಕೆಯ ವ್ಯಕ್ತಿ. ಯಕ್ಷಗಾನ ವಲಯದಲ್ಲಿ ಎಲ್ಲರೊಂದಿಗೂ ಬೆರೆಯುವ ಸ್ವಭಾವದವರು. ನನ್ನ ಮಿತ್ರರಾದ ಯಶವಂತ ಶೆಟ್ಟರು ನನಗೆ ಫೋನ್ ಮೂಲಕ ಅಪಘಾತದ ವಿಷಯ ತಿಳಿಸಿದಾಗ, ನಾನು ಕೂಡಲೇ ರಜೆ ಹಾಕಿ ವೆನ್ಲಾಕ್ ಆಸ್ಪತ್ರೆಗೆ ತೆರಳಿದೆ. ವೆನ್ಲಾಕ್ ಆಸ್ಪತ್ರೆಯಲ್ಲಿ ಬೆಡ್ ಇಲ್ಲದೇ, ಹೆಚ್ಚಿನ ಕಲಾವಿದರನ್ನು ನೆಲದಲ್ಲೇ ಮಲಗಿಸಿದ್ದರು. ಪ್ರಜ್ಞಾಹೀನರಾಗಿದ್ದ ಶೇಖರ ಶೆಟ್ಟರನ್ನು ಒಂದು ಬೆಡ್ ನಲ್ಲಿ ಮಲಗಿಸಿದ್ದರು. ನೋವಿನಿಂದಾಗಿ ತುಂಬಾ ನರಳುತ್ತಿದ್ದರು. ಅವರು ಕೈಕಾಲುಗಳನ್ನು ಅಲುಗಾಡಿಸುತ್ತಿದ್ದ ಕಾರಣ, ಅವರ ಕೈ ಕಾಲುಗಳನ್ನು ಮಂಚಕ್ಕೆ ಕಟ್ಟಿ ಹಾಕಿದ್ದರು. ತೀವ್ರ ಗಾಯಗೊಂಡಿದ್ದ ಪದ್ಮನಾಭ ರೈ ಹಾಗೂ ದಾಸಪ್ಪ ಗೌಡರನ್ನು ಎಮರ್ಜೆನ್ಸಿ ಕೊಠಡಿಯಲ್ಲಿ ಮಲಗಿಸಿದ್ದರು. ಪದ್ಮನಾಭ ರೈಯವರು, ನಂತರದಲ್ಲಿ ನಿಧನ ಹೊಂದಿದ ದಾರುಣ ವಾರ್ತೆ ಬಂತು. ತೀವ್ರ ಗಾಯಗೊಂಡಿದ್ದ ನಾಲ್ವರು ಮಹಿಳಾ ಕಲಾವಿದರು, ಸರಪಾಡಿ ಅಶೋಕ ಶೆಟ್ಟಿ ಹಾಗೂ ಮಾಡಾವು ಕೊರಗಪ್ಪ ರೈಯವರನ್ನು ನಾನು, ಯಶವಂತ ಶೆಟ್ಟಿ ಹಾಗೂ ಸರಪಾಡಿಯ ಪುರುಷೋತ್ತಮ ಪೂಜಾರಿ ಸೇರಿ ಕಂಕನಾಡಿ ಆಸ್ಪತ್ರೆಗೆ ಶಿಫ್ಟ್ ಮಾಡಿದೆವು. ಉಳಿದ ಕಲಾವಿದರನ್ನು ಶಿಫ್ಟ್ ಮಾಡಲು ವೆನ್ಲಾಕ್ ಆಸ್ಪತ್ರೆಯ ವೈದ್ಯರು ಒಪ್ಪದ ಕಾರಣ, ಅವರಿಗೆ ವೆನ್ಲಾಕ್ ಆಸ್ಪತ್ರೆಯಲ್ಲೇ ಉಳಿಸಿಕೊಳ್ಳಬೇಕಾಯಿತು. ಕಂಕನಾಡಿಗೆ ದಾಖಲಿಸಿದ ಕಲಾವಿದರ ಬಿಲ್ ಇದ್ದ ಔಷದದ ಮೊತ್ತವನ್ನು ಶ್ರೀ ಹರಿಕೃಷ್ಣ ಪುನರೂರು ನೀಡಿ ಸಹಕರಿಸಿದರೆ, ಉಳಿದ ಎಲ್ಲಾ ವೆಚ್ಚವನ್ನು ನಾನೇ ಭರಿಸಿದೆ. ಕಲಾವಿದರು ಡಿಸ್ಚಾರ್ಜ್ ಆಗುವವರೆಗೆ ನಾನು, ಯಶವಂತ ಶೆಟ್ಟಿ ಮತ್ತು ಪುರುಷೋತ್ತಮ ಪೂಜಾರಿಯವರು ಆಸ್ಪತ್ರೆಯಲ್ಲೇ ಉಳಕೊಳ್ಳಬೇಕಾಯಿತು. ಶೇಖರ ಶೆಟ್ಟರು ನಿಧನರಾಗಿ ಅವರ ಪಾರ್ಥಿವ ಶರೀರವನ್ನು ಬೆಳ್ಮಣ್ಣಿಗೆ ಕೊಂಡು ಹೋದರು. ಇದಾವುದೂ ಅರಿಯದ ಅವರ ಧರ್ಮಪತ್ನಿ ಮುಂಬೈನಿಂದ 11 ಘಂಟಗೆ ನೇರವಾಗಿ ವೆನ್ಲಾಕ್ ಆಸ್ಪತ್ರೆಗೆ ಬಂದರು. ನನ್ನಲ್ಲಿ, "ಅವರು ಹೇಗಿದ್ದಾರೆ, ಈಗ ಎಲ್ಲಿ ಇದ್ದಾರೆ?" ಎಂದು ಪ್ರಶ್ನಿಸಿದಾಗ, ನನಗೆ ಅತ್ಯಂತ ವೇದನೆಯಾಯಿತು. ಏನು ಹೇಳುವುದು? ಸತ್ಯವನ್ನೋ ಅಥವಾ ಸುಳ್ಳನ್ನೋ ಎಂಬ ಜಿಜ್ಞಾಸೆ ನನ್ನನ್ನು ಕಾಡಿತು. ಕೊನೆಗೆ ಧೈರ್ಯವಾಗಿ "ಬೆಳ್ಮಣ್ಣಿಗೆ ಕೊಂಡು ಹೋದರು" ಎಂದಷ್ಟೇ ಹೇಳಿ, ಅವರಿಗೆ ಕಾಣದಂತೆ ತುಂಬಿದ ಕಣ್ಣೀರು ಒರೆಸಿದೆ. ಬೆಳ್ಮಣ್ಣು ಶೇಖರ ವಿ ಶೆಟ್ಟರಿಂದ ತುಂಬಾ ನಿರೀಕ್ಷೆಯೊಂದಿಗೆ ಆರಂಭಗೊಂಡ ಬೆಳ್ಮಣ್ಣು ಮೇಳವು ದುರಂತದಲ್ಲೇ ಅಂತ್ಯಗೊಂಡದ್ದು ಅತ್ಯಂತ ಬೇಸರದ ವಿಷಯ. ನಿಧನ ಹೊಂದುವ ಕಾಲಕ್ಕೆ ಶೆಟ್ಟರಿಗೆ ಕೇವಲ 33 ವರ್ಷ ವಯಸ್ಸಾಗಿತ್ತು. ಉತ್ತಮ



**ಎಂ.ಶಾಂತರಾಮ ಕುಡ್ವ**

ಬದುಕನ್ನು ಸಾಗಿಸಬಹುದಾಗಿದ್ದು, ಯಕ್ಷಗಾನದ ಸೆಳೆತಕ್ಕೆ ಒಳಗಾಗಿ ಉತ್ತಮ ನೌಕರಿ ತ್ಯಜಿಸಿ, ಯಕ್ಷಗಾನದತ್ತ ಹೊರಳಿದ ಶೇಖರ ಶೆಟ್ಟರ ದುರಂತ ನಿಧನವು ಯಕ್ಷಗಾನಕ್ಕೆ ದೊಡ್ಡ ನಷ್ಟವೂ ಹೌದು.

*ಲೇಖಕರು– ಎಂ.ಶಾಂತರಾಮ ಕುಡ್ವ, ಮೂಡುಬಿದಿರೆ (ಪೂರಕ ಮಾಹಿತಿ: ಸರಪಾಡಿ ಅಶೋಕ ಶೆಟ್ಟಿ)*

## ಬಯಲಾಟ ಅಕಾಡೆಮಿ ಪ್ರಶಸ್ತಿ ಪುರಸ್ಕೃತ – ಬೇಗಾರ್ ಪದ್ಮನಾಭ ಶೆಟ್ಟಿಗಾರ್






**ಬ**ಡಗುತಿಟ್ಟು ಯಕ್ಷಗಾನ ಕ್ಷೇತ್ರಕ್ಕೆ ಮಹಾನ್ ಕೊಡುಗೆ ನೀಡಿದ ಚಿಕ್ಕಮಗಳೂರು ಜಿಲ್ಲೆಯ ಮಲೆನಾಡು ಕಲಾವಿದರಲ್ಲಿ ಅಗ್ರಮಾನ್ಯ ಹೆಸರು ಬೇಗಾರು ಪದ್ಮನಾಭ ಶೆಟ್ಟಿಗಾರರದ್ದು. ಎಲೆಮರೆಯ ಕಾಯಿಯಾಗಿ ದೀರ್ಘ ಕಾಲ ಕಲಾಸೇವೆ ಮಾಡಿದ ಇವರಿಗೆ ಈಗ 70ರ ಹರೆಯ..

ಬಡಗುತಿಟ್ಟು ಯಕ್ಷಗಾನ ಕ್ಷೇತ್ರಕ್ಕೆ ಮಲೆನಾಡ ಕಲಾವಿದರ ಕೊಡುಗೆ ಅಪಾರ. ಶೃಂಗೇರಿ, ತೀರ್ಥಹಳ್ಳಿ, ಬೇಗಾರು, ನಗರ, ಹೊಸನಗರ ಮುಂತಾದ ಪ್ರಾಂತ್ಯದ ಕಲಾವಿದರು ಯಕ್ಷಗಾನದ ತೆಂಕು, ಬಡಗಿನ ಕ್ಷೇತ್ರಕ್ಕೆ ಗಣನೀಯ ಕೊಡುಗೆ ನೀಡಿದ್ದಾರೆ. ಎರಡನೇ ವೇಷಧಾರಿ ದಿ.ನಗರ ಜಗನ್ನಾಥ ಶೆಟ್ಟಿ, ರಾಜ್ಯ ಪ್ರಶಸ್ತಿ ಪುರಸ್ಕೃತ ಹಿರಿಯ ಭಾಗವತ ದಿ.ನೆಲ್ಲೂರು ಮರಿಯಪ್ಪ ಆಚಾರ್, ದಿ.ಶೃಂಗೇರಿ ಭಾಸ್ಕರ ಶೆಟ್ಟಿ, ತೆಂಕು ಬಡಗಿನ ಸವ್ಯಸಾಚಿ ಸ್ತ್ರೀ ವೇಷಧಾರಿ ಎಮ್.ಕೆ. ರಮೇಶಾಚಾರ್, ಖ್ಯಾತ ಪುಂಡು ವೇಷಧಾರಿ ತೀರ್ಥಹಳ್ಳಿ ಗೋಪಾಲಾಚಾರ್, ಕಿಗ್ಗ ಹಿರಿಯಣ್ಣಾಚಾರ್, ಬೇಗಾರ್ ಶಿವಕುಮಾರ್, ತೀರ್ಥಹಳ್ಳಿ ಚಂದ್ರಾಚಾರ್, ಮುಂತಾದವರು ಮಲೆನಾಡು ಪ್ರಾಂತ್ಯದವರು ಎನ್ನುವುದು ಗಮನಾರ್ಹ. ಇಂತಹ ಮಹಾನ್ ಕಲಾವಿದರ ಸಾಲಿನಲ್ಲಿ ಗುರುತಿಸಲ್ಪಡುವವರಲ್ಲಿ ಪದ್ಮನಾಭ ಶೆಟ್ಟಿಗಾರರು ಸಹ ಒಬ್ಬರು.

ಶೃಂಗೇರಿ ತಾಲೂಕಿನ ಬೇಗಾರಿನಲ್ಲಿ ವಾಸವಾಗಿರುವ ಶೆಟ್ಟಿಗಾರರು ಮೂಲತಃ ಉಡುಪಿ ಜಿಲ್ಲೆಯ ಬ್ರಹ್ಮಾವರ ಸಮೀಪ ಚೇರ್ಕಾಡಿಯವರು. 1948ರಲ್ಲಿ ಚೇರ್ಕಾಡಿಯ ತಿಮ್ಮ ಶೆಟ್ಟಿಗಾರ್ ಹಾಗು ನರಸಮ್ಮ ದಂಪತಿಗಳ ಸುಪುತ್ರನಾಗಿ ಜನಿಸಿದ ಇವರು ಏಳನೆ ತರಗತಿ ವಿದ್ಯಾಭ್ಯಾಸ ಮಾಡಿ ತಮ್ಮ ಹದಿನಾರನೇ ವಯಸ್ಸಿನಲ್ಲಿ ಯಕ್ಷರಂಗ ಪ್ರವೇಶ ಮಾಡಿದರು. ಮಟ್ಪಾಡಿ ಶೈಲಿಯ ಪ್ರಾತಿನಿಧಿಕರಾದ ಶ್ರೀನಿವಾಸ ನಾಯ್ಕರಲ್ಲಿ, ಹಾಗು ಕೃಷ್ಣ ಶೆಟ್ಟಿಗಾರರಲ್ಲಿ ಹೆಜ್ಜೆಗಾರಿಕೆ ಕಲಿತ ಇವರು ಗೋಪಾಲಕೃಷ್ಣ ಮಾಷ್ಟರಲ್ಲಿ ಮಾತುಗಾರಿಕೆಯ ಹದ ಕಲಿತುಕೊಂಡರು. ಇವರ ವೇಷಗಾರಿಕೆ, ಎತ್ತರದ ನಿಲುವು ಹೆಜ್ಜೆಗಾರಿಕೆಯಲ್ಲಿ ವೀರಭದ್ರ ನಾಯಕರ ಛಾಪನ್ನು ಗುರುತಿಸಬಹುದುದಾಗಿದೆ. ಬಡಗುತಿಟ್ಟಿನ ಗೋಳಿಗರಡಿ ಮೇಳದಲ್ಲಿ ಗೆಜ್ಜೆ ಕಟ್ಟಿದ ಇವರು ನಂತರ ದಿ.ಕಾಳಿಂಗ ನಾವಡರ ಪದ್ಯದಿಂದ ಪ್ರೇರಣೆಗೊಂಡು ಸಾಲಿಗ್ರಾಮ ಮೇಳ ಸೇರಿದರು. ಅಲ್ಲಿನ "ರತಿರೇಖಾ" ಪ್ರಸಂಗದ ಅವರ ಶಶಿಪಾಲನ ಪಾತ್ರ, ಹಾಗು "ಚಲುವೆ ಚಿತ್ರಾವತಿ" ಪ್ರಸಂಗದ ಇವರ ಪಾತ್ರಗಳು ಎಂಬತ್ತರ ದಶಕದಲ್ಲಿ ಅವರಿಗೆ ವಿಶೇಷ ಖ್ಯಾತಿಯನ್ನು ತಂದುಕೊಟ್ಟಿತ್ತು. ಸ್ವತಹ ಅಂದಿನ ಭಾಗವತರಾದ ಕಾಳಿಂಗ ನಾವಡರು ಅವರನ್ನು ಮೆಚ್ಚಿ ಹರಸಿದ್ದರು. ಬಡಗು ತಿಟ್ಟಿನ ಮಂದಾರ್ತಿ ಮೇಳದಲ್ಲಿ ದೀರ್ಘ ಕಾಲ ತಿರುಗಾಟ ಮಾಡಿದ ಇವರು ಸದ್ಯ ತನ್ನ 62ರ ಇಳಿ ವಯಸ್ಸಿನಲ್ಲೂ ಹಿರಿಯಡಕ ಮೇಳದಲ್ಲಿ ಸೇವೆ ಸಲ್ಲಿಸುತಿದ್ದಾರೆ. ತೆಂಕುತಿಟ್ಟಿನ ಸುರತ್ಕಲ್ ಮೇಳದಲ್ಲಿ ಶೇಣಿ ಗೋಪಾಲ ಕೃಷ್ಣ ಭಟ್, ತೆಕ್ಕಟ್ಟೆ ಅನಂದ ಮಾಸ್ತರ್, ವೇಣೂರು ಸುಂದರ ಆಚಾರ್, ಎಂ.ಕೆ.ರಮೇಶಾಚಾರ್ ಮುಂತಾದವರ ಒಡನಾಡಿಯಾಗಿ ತಿರುಗಾಟ ಮಾಡಿದ್ದಾರೆ. ಬಡಗು ಹಾಗು ತೆಂಕು ತಿಟ್ಟಿನ ಸ್ತ್ರೀಭೂಮಿಕೆಯಲ್ಲೂ ಸೈ ಎನಿಸಿಕೊಂಡಿದ್ದಾರೆ. ಅಂದು ಅವರು ನಟಿಸಿದ ಪ್ರಭಾವತಿ, ಭ್ರಮರಕುಂತಳೆ, ಮೀನಾಕ್ಷಿ ಮುಂತಾದ ಪಾತ್ರಗಳು ಜನಮನ ರಂಜಿಸಿದ್ದವು. ನಿರಂತರ ಐದು ದಶಕಗಳ ಕಾಲ ಕಲಾಸಾಧನೆಯಲ್ಲಿ ಪೌರಾಣಿಕ ಪಾತ್ರಗಳಾದ ಕೀಚಕ,



ಕಾರ್ತವೀರ್ಯ, ಭಸ್ಮಾಸುರ ರಾವಣ, ಭೀಷ್ಮ, ಮುಂತಾದ ಪಾತ್ರಗಳಿಗೆ ತಮ್ಮದೆ ನಡೆಯಲ್ಲಿ ಜೀವ ತುಂಬಿದ್ದಾರೆ. ಕೇವಲ ಬಡಾಬಡಗುತಿಟ್ಟಿನವರಿಗೆ ಮಾತ್ರ ಸೀಮಿತವಾಗಿದ್ದ ಕೆಲವೊಂದು ವಿಶಿಷ್ಟ ಪಾತ್ರಗಾದ ಕೀಚಕ, ಕಂಸ, ಭಸ್ಮಾಸುರ, ಮುಂತಾದ ಪಾತ್ರಗಳಿಗೆ ವಿಶೇಷವಾಗಿ ಜೀವ ತುಂಬಿದ ಇವರ ಇಂತಹ ಹಲವಾರು ಪಾತ್ರಗಳು ಕಲಾರಸಿಕರ ಮನಗೆದ್ದಿವೆ. ಯಕ್ಷಗಾನ ಕಲೆಯಲ್ಲಿ ಸನ್ನಿತವಾದ ನಡೆ,ಕುಣಿತ, ಮುದ್ರೆ, ಹಾವ– ಭಾವ ಮಾತುಗಾರಿಕೆ, ಎಲ್ಲದರಲ್ಲೂ ಪ್ರೌಢಿಮೆ ಸಾಧಿಸಿದ ಇವರು ಸಿದ್ದಿಯ ನೆಲೆಯಲ್ಲಿ ಗುರುತಿಸಬಹುದಾದ ಪ್ರಸಿದ್ದ ಕಲಾವಿದ. ಪೌರಾಣಿಕ ಪ್ರಸಂಗದ ಪಾತ್ರಗಳು ಸ್ವಲ್ಪ ಸೊರಗಿದರೂ ಸಹಿಸದ ಇವರ ಗದಾಯುದ್ದದ ಕೌರವ, ಕರ್ಣಾರ್ಜುನದ ಕರ್ಣ, ರಾವಣ ವಧೆಯ ರಾವಣ, ಶನೀಶ್ವರ,ಅಲ್ಲದೆ ನಾಗಶ್ರೀಯ ಶಿಥಿಲ ಮುಂತಾದ ಪಾತ್ರಗಳು ವಿಮರ್ಶಕರ ಪರೀಕ್ಷೆಯಲ್ಲಿ ತೇರ್ಗಡೆಯಾದವುಗಳು.

*ಲೇಖಕರು – ಪ್ರೋ.ಎಸ್.ವಿ.ಉದಯ ಕುಮಾರ ಶೆಟ್ಟಿ ಮಣಿಪಾಲ.*

***ನಿಮಗಿದು ಗೊತ್ತೇ? – ಶಿವ ಪಂಚಾಕ್ಷರಿ ಮಹಾತ್ಮೆಯಂತಹ ಉತ್ಕೃಷ್ಟ ಕೃತಿಗಳನ್ನು ಯಕ್ಷಗಾನಕ್ಕೆ ನೀಡಿದ ಕಿರಿಕ್ಕಾಡು ವಿಷ್ಣು ಭಟ್ಟರನ್ನು ಮೇ 16, 1981 ರಲ್ಲಿ ಬದಿಯಡ್ಕದಲ್ಲಿ ನಡೆದ ಸಮಾರಂಭದಲ್ಲಿ ಯಕ್ಷಗಾನದ ಕುಲಪತಿ ಎಂದು ಕರೆದು ಗೌರವಿಸಲಾಗಿತ್ತು. ಈ ಸಂದರ್ಭ ಅವರ ಆತ್ಮಕಥೆ ಯಕ್ಷರಸ ಜೀವನ ಪುಸ್ತಕದ ಬಿಡುಗಡೆಯೂ ನಡೆದಿತ್ತು.***

ಗಮನಿಸಿ– ನಮ್ಮ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳ ಅನಿಸಿಕೆ ಅಭಿಪ್ರಾಯಗಳು ಲೇಖಕರದ್ದೇ ಹೊರತು, ಸಂಪಾದಕ ಮಂಡಳಿಯದ್ದಲ್ಲ. ನಿಮ್ಮ ಪ್ರತಿಕ್ರಿಯೆಯನ್ನು ಕಳುಹಿಸಬೇಕಾದ ಇ–ಮೇಲ್ – nadanoopuravandaru@gmail.com ಮೊಬೈಲ್ ಸಂಖ್ಯೆ– 9482847978. ನಮ್ಮ ವೆಬ್ ಸೈಟ್ ವಿಳಾಸ– https://nyt.1ngo.in/ – ಸಂಪಾದಕರು

# ಧೀರ ಕಲೆಯೊಳಗೆ ಕೀರವಾಣಿಯರು – 17

***ಹೊರದೇಶದಲ್ಲೂ ಯಕ್ಷಗಾನವನ್ನು ಕಲಿಸಿದ ಕಲಾವಿದೆ – ಶ್ರೀಮತಿ ಸುಮಾ ಗಡಿಗೆಹೊಳೆ***



ತನ್ನೂರಲ್ಲಿ ಯಕ್ಷಗಾನವನ್ನು ಕಲಿತು, ಕಲಿಸಿ, ತಂಡಕಟ್ಟಿ ಪ್ರದರ್ಶನ ನೀಡಿ ಪ್ರಸಿದ್ಧರಾದ ಅನೇಕ ಮಹಿಳಾ ಕಲಾವಿದೆಯರು ನಮ್ಮಲ್ಲಿದ್ದಾರೆ. ಆದರೆ ದೂರದ ಹೊರದೇಶಕ್ಕೆ ಹೋಗಲು ಸಿಕ್ಕ ಅವಕಾಶವನ್ನು ಚೆನ್ನಾಗಿ ಬಳಸಿಕೊಂಡು, ಅಲ್ಲಿಯ ನೆಲದಲ್ಲಿ ಯಕ್ಷಗಾನವನ್ನು ಬಿತ್ತುವುವುದಿದೆಯಲ್ಲಾ, ಅದೂ ಮಹಿಳೆಯಾಗಿ ಒಂದು ವಿಶೇಷ ಸಾಧನೆಯೇ ಸರಿ. ಇಂತಹ ವಿಶೇಷ ಸಾಧಕಿ, ಯಕ್ಷಗಾನ ಕಲಾವಿದೆ, ಯಕ್ಷಶಿಕ್ಷಕಿ ಶ್ರೀಮತಿ ಸುಮಾ ಗಡಿಗೆಹೊಳೆ.

ಶಿರಸಿಯ ನಡುಗೋಡಿನ ಜಿ. ಮಹಾಬಲೇಶ್ವರ ಭಟ್ ಹಾಗೂ ಲಲಿತಾ ಭಟ್ ಇವರ ಮಗಳಾಗಿ 1973 ರ ಡಿಸೆಂಬರ್ 14 ರಂದು ಜನಿಸಿದ ಸುಮಾ ಗಡಿಗೆಹೊಳೆಯವರು ಪಡೆದದ್ದು ಪಿಯುಸಿ ಶಿಕ್ಷಣ. 1992 ರಲ್ಲಿ ಉತ್ತಮ ಕೃಷಿಕರಾದ ಶ್ರೀ ವೆಂಕಟರಮಣ ಹೆಗಡೆಯವರನ್ನು ಕೈ ಹಿಡಿದ ಸುಮಾ ಅವರ ಯಕ್ಷಗಾನವನ್ನು ಕಲಿತದ್ದು ತನ್ನ 32 ನೇ ವಯಸ್ಸಿನಲ್ಲಿ. 2007ನೇ ಯಕ್ಷಗಾನ ರಂಗವನ್ನು ಪ್ರವೇಶಿಸಿದ್ದು ಕಾಶ್ಯಪ ಪ್ರತಿಷ್ಠಾನ ಮಹಿಳಾ ಯಕ್ಷಗಾನ ಮಂಡಳಿ ಗಡಿಗೆಹೊಳೆಯ ಮೂಲಕ ಕಲಿತು, ಕಲಾವಿದೆಯಾದದ್ದು. 'ಭಸ್ಮಾಸುರ ಮೋಹಿನಿ'ಯ ಭಸ್ಮಾಸುರ ಇವರ ಮಾಡಿದ ಮೊದಲ ವೇಷ.

ಹಿರಿಯ ಸವ್ಯಸಾಚಿ ಕಲಾವಿದರಾದ ಶ್ರೀ ಗಣಪತಿ ಭಾಗ್ವತ್ ಕವ್ವಾಳೆಯವರಲ್ಲಿ ಯಕ್ಷಗಾನ ನೃತ್ಯಾಭ್ಯಾಸವನ್ನು ಮಾಡಿದ ಸುಮಾ ಗಡಿಗೆಹೊಳೆಯವರು ಶ್ರೀ ಸುಬ್ರಾಯ ಭಟ್ ಗಡಿಗೆಹೊಳೆಯವರಲ್ಲಿ ಸಾಹಿತ್ಯವನ್ನೂ ಅಭ್ಯಾಸ ಮಾಡಿದರು. ಭಸ್ಮಾಸುರ, ಭೀಷ್ಮ, ಕರ್ಣ, ಭೀಮ, ಈಶ್ವರ, ವಿಕ್ರಮಾದಿತ್ಯ, ಅರ್ಜುನ, ರಾಮ, ಕೃಷ್ಣ, ಶಿಶುಪಾಲ, ರಾವಣ, ವಿಕ್ರಮಾದಿತ್ಯ, ದಶರಥ, ದುಷ್ಟಬುದ್ಧಿ ಮುಂತಾದ ವಿವಿಧ ರೀತಿಯ ಪಾತ್ರಗಳನ್ನು ನಿರ್ವಹಿಸಿ, ಸೈ ಎನಿಸಿಕೊಂಡವರು ಸುಮಾ ಅವರು. ಸ್ವರ್ಣವಲ್ಲೀ ಸಂಸ್ಕೃತೋತ್ಸವದಲ್ಲಿ ಎಂ.ರಾಜಗೋಪಾಲಾಚಾರ್ಯ ವಿರಚಿತ ಸಂಸ್ಕೃತ ಯಕ್ಷಗಾನ 'ಗದಾಯುದ್ಧ' ದ ಪ್ರದರ್ಶನದಲ್ಲಿಯೂ ಭಾಗವಹಿಸಿದವರು ಇವರು. ಚಂದನವಾಹಿನಿಯಲ್ಲಿ, ಆಕಾಶವಾಣಿ ಕಾರವಾರದಲ್ಲಿ ಇವರ ಸಂದರ್ಶನಗಳು ಪ್ರಸಾರಗೊಂಡಿವೆ. ಶಿರಸಿ, ಸಿದ್ಧಾಪುರ, ಯಲ್ಲಾಪುರ, ಶಿವಮೊಗ್ಗ, ಹುಬ್ಬಳ್ಳಿ, ಧಾರವಾಡ, ಗದಗ, ಹೊರರಾಜ್ಯಗಳಾದ ಮುಂಬಯಿ, ದೆಹಲಿ, 2023 ರಲ್ಲಿ ಅಂದರೆ ಈ ವರ್ಷ ಅಮೇರಿಕಾದಲ್ಲಿಯೂ ಯಕ್ಷಗಾನ ಪ್ರದರ್ಶನ ನೀಡಿದ ಹೆಗ್ಗಳಿಕೆ ಇವರದು. ಹೀಗೆ ನಾಲ್ಕುನೂರಕ್ಕೂ ಹೆಚ್ಚು ವೇದಿಕೆಗಳಲ್ಲಿ ದೇಶ–ವಿದೇಶಗಳಲ್ಲಿ ಯಕ್ಷಗಾನವನ್ನು ಪ್ರದರ್ಶಿಸಿದ ಹೆಮ್ಮೆ ಇವರದು. 2018 ರಲ್ಲಿ ಶಿರಸಿಯ ಆದರ್ಶ ವನಿತಾ ಸಮಾಜದಲ್ಲಿ "ಯಕ್ಷಕಲಾಸಂಗಮ (ರಿ) ಮಹಿಳಾ ಮತ್ತು ಮಕ್ಕಳ ಯಕ್ಷಗಾನ ಮಂಡಳಿ ಎಂಬ ಕಲಿಕಾ ಕೇಂದ್ರವನ್ನು ಸ್ಥಾಪಿಸಿ, ಮಹಿಳೆಯರಿಗೆ ಮತ್ತು ಮಕ್ಕಳಿಗೆ ಯಕ್ಷಗಾನದ ಪಾರಂಪರಿಕ ಕುಣಿತಗಳನ್ನು ಕಲಿಸಿ ಪ್ರದರ್ಶನಕ್ಕೆ ಸಜ್ಜುಗೊಳಿಸುತ್ತಿದ್ದಾರೆ. ಇವರ ಸಂಸ್ಥೆಯಲ್ಲಿ 6 ವರ್ಷದಿಂದ 66 ವರ್ಷದವರೆಗಿನವರೂ ಕಲಿಯುತ್ತಿದ್ದಾರೆ ಎಂಬುವುದೇ ವಿಶೇಷ. ಯಕ್ಷಗಾನದ ಜೊತೆಗೆ ತಾಳಮದ್ದಳೆಯ ಅಭ್ಯಾಸವನ್ನು ಮಾಡಿ, ಪ್ರದರ್ಶನ ನೀಡುತ್ತಿದ್ದಾರೆ.



2022ರಲ್ಲಿ ಸುಮಾ ಗಡಿಗೆಹೊಳೆಯವರ ಕನಸಿನ ಕೂಸು 'ಯಕ್ಷಕಲಾಸಂಗಮ(ರಿ)ಕ್ಕೆ ನಾಡಿನ ಹಲವು ಮಹನೀಯರನ್ನು ಮಾರ್ಗದರ್ಶಕರನ್ನಾಗಿಸಿ 'ಯೋಜನೆ–ಯೋಚನೆ' ಎಂದು ಕಲಿಕೆಗೆ ಒತ್ತುಕೊಟ್ಟು ಹಲವಾರು ಕಾರ್ಯಕ್ರಮಗಳನ್ನು ಮಾಡಿಸುವುದರ ಜೊತೆಗೆ ಮಹಿಳೆಯರಿಗೆ ಮತ್ತು ಮಕ್ಕಳಿಗೆ ಚೆಂಡೆ ತರಬೇತಿಯನ್ನು ಪ್ರಾರಂಭಿಸಿದ್ದಾರೆ. ಇದರ ಜೊತೆಗೆ ಮತ್ತೊಂದು ಸಂಗತಿಯೆಂದರೆ ಈ ವರ್ಷ ಅಮೇರಿಕಾದಲ್ಲಿ ಆಸಕ್ತ ಕನ್ನಡಿಗರಿಗೆ ಯಕ್ಷಗಾನವನ್ನು ಕಲಿಸಿ, ಪ್ರದರ್ಶನಕೊಡಿಸಿದ



ಸಂತೋಷ ಇವರದ್ದು. ಪ್ರತೀ ವರ್ಷ ಇವರ ಸಂಸ್ಥೆಯ ವಾರ್ಷಿಕೊತ್ಸವದಲ್ಲಿ ಹಿರಿಯ ಸಾಧಕರೋರ್ವರನ್ನು ಗುರುತಿಸಿ, ಗೌರವಿಸುವ ಪರಿಪಾಠವನ್ನೂ ಬೆಳೆಸಿಕೊಂಡು ಬಂದಿದ್ದಾರೆ. 'ಜನಪದ ರತ್ನ' ಎಂಬ ರಾಜ್ಯಮಟ್ಟದ ಪ್ರಶಸ್ತಿ, ಅಮೇರಿಕಾದ ಕ್ಯಾಲಿಫೋರ್ನಿಯಾದ ಕನ್ನಡ ಕೂಟದವರ ಸನ್ಮಾನ, ಅಮೇರಿಕಾ ಹವ್ಯಕ ಸಂಘದವರಿಂದ ಸನ್ಮಾನ, ದೆಹಲಿ ಗೋಕರ್ಣ ಮಂಡಲದವರಿಂದ ಸನ್ಮಾನ, ಮುಂಬಯಿ ಹವ್ಯಕ ವೆಲ್ಫೇರ್ ನವರಿಂದ ಸನ್ಮಾನ ಹಾಗೂ ರಾಜ್ಯಾದ್ಯಂತ ಅನೇಕ ಕಡೆಗಳಲ್ಲಿ ಸಂಘ–ಸಂಸ್ಥೆಗಳು ಇವರ ಸಾಧನೆಯನ್ನು ಗುರುತಿಸಿ ಸನ್ಮಾನಿಸಿವೆ. ಇವರ ಕಲಾಸೇವೆ ಹೀಗೆಯೇ ಮುಂದುವರಿದು, ಅನೇಕ ಕಲಾಕುಸುಮಗಳು ಇವರ ಸಂಸ್ಥೆಯಿಂದ ಹೊರಬರಲಿ ಎಂದು ಆಶಿಸೋಣ.

***ಲೇಖಕರು– ಸಾಯಿಸುಮಾ ಎಂ. ನಾವಡ, ಕಾರಿಂಜ***

---

***ನಿಮಗಿದು ಗೊತ್ತೇ? – 1970–80ರ ದಶಕದಲ್ಲಿ ಯಕ್ಷಗಾನದ ದೇವಿ ಪಾತ್ರಕ್ಕೆ ಹೆಸರಾಗಿದ್ದ ಹಿರಿಯ ಕಲಾವಿದ ಕೋಡಿ ಕುಷ್ಟ (ಕೃಷ್ಣ) ಗಾಣಿಗರು ಶ್ರೀದೇವಿ ಮಹಾತ್ಮೆಯ ದೇವಿ ಪಾತ್ರಕ್ಕೆ ವಿಶಿಷ್ಟವಾದ ಅನುಸಂಧಾನ ನೀಡಿದವರು. ಇಂದಿಗೂ ತೆಂಕು ಶೈಲಿಯಲ್ಲಿ ಗಾಣಿಗರ ಹಾದಿಯನ್ನೇ ಅನುಸರಿಸಲಾಗುತ್ತಿದೆ. ಕಟೀಲು ಮೇಳದಲ್ಲಿ ಕುಷ್ಟ ಗಾಣಿಗರ ದೇವಿ ಪಾತ್ರ ಹಾಗೂ ಬಣ್ಣದ ಕುಟ್ಟಪ್ಪುರವರ ಮಹಿಷನ ಪಾತ್ರ ಬಹಳ ಜನಪ್ರಿಯವಾಗಿತ್ತು. ಕುಷ್ಟ ಗಾಣಿಗರ ಶ್ರೀದೇವಿ ಪಾತ್ರದ ಮಹತ್ತರವಾದಂತಹ ವೈಶಿಷ್ಟ್ಯಪೂರ್ಣ ಅಂಶವೆಂದರೆ ಅದು ಬಣ್ಣಗಳಲ್ಲಿ ಅವರು ಮಾಡುತ್ತಿದ್ದ ಬದಲಾವಣೆ. ಕದಂಬ ಕೌಶಿಕೆಯಾಗಿ ಉಯ್ಯಾಲೆಯಾಡುತ್ತಾ ಶುಂಭಾದಿ ದಾನವರನ್ನು ಮರ್ದಿಸುವ ಸಮಯದಲ್ಲಿ ಬಣ್ಣದಲ್ಲಿ ವ್ಯತ್ಯಾಸಗಳನ್ನು ಮಾಡುತ್ತಿದ್ದರು. ಹಾಗೆಯೇ ಪೆರುವಾಯಿ ನಾರಾಯಣ ಶೆಟ್ಟಿ, ಪಡ್ರೆ ಚಂದು ರವರ ಜಾಬಾಲಿ ಹಾಗೂ ಕುಷ್ಟ ಗಾಣಿಗರ ನಂದಿನಿ ಜೋಡಿಯೂ ಪ್ರೇಕ್ಷಕರ ಮನಸನ್ನು ಗೆದ್ದಿದ್ದವು.***

## ಬವಲಾಡಿ ಹಿರಿಯಣ್ಣ ಹೆಬ್ಬಾರರ ಯಕ್ಷಗಾನ ಪ್ರಸಂಗ ಕೃತಿಗಳು



ಉಮೇಶ ಶಿರೂರು

ಬವಲಾಡಿ ಹಿರಿಯಣ್ಣ ಹೆಬ್ಬಾರ (1877 –1942) ಹಿರಿಯ ಶ್ರೇಷ್ಠ ಯಕ್ಷಗಾನ ಕವಿ. ಇವರ ತಂದೆ ಶಂಭು ಹೆಬ್ಬಾರ, ತಾಯಿ ಲಕ್ಷ್ಮಮ್ಮ, ಹೆಂಡತಿ ಸುಬ್ಬಮ್ಮ ಹುಟ್ಟೂರು ಈಗಿನ ಬೈಂದೂರು ತಾಲೂಕಿನ ಬವಲಾಡಿ. ಮೊಗೇರಿ ರಾಮಪ್ಪ ಅಡಿಗರು ಇವರ ಗುರುಗಳು ಕನ್ನಡ ಮತ್ತು ಸಂಸ್ಕೃತ ಭಾಷೆಗಳಲ್ಲಿ ವಿದ್ವತ್ತನ್ನು ಪಡೆದಿದ್ದ ಹೆಬ್ಬಾರರು ಅಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ. ಯಕ್ಷಗಾನ ಕವಿಗಳಾಗಿ ಪ್ರಸಂಗ ರಚನೆ ಮಾಡಿರುವ ಇವರು ಭಾಗವತರಾಗಿ, ಮದ್ದಳೆ ವಾದಕರಾಗಿ ಕೂಡ ಪ್ರಸಿದ್ದರಾಗಿದ್ದರು. ವಿಶ್ವಾಮಿತ್ರ ಪ್ರತಾಪ–ದುಷ್ಯಂತ ಚರಿತ್ರೆ, ಪಾಂಡವ ವಿಜಯ, ಭಾನುಮತಿ ಕಲ್ಯಾಣ ಮತ್ತು ಮಾರಿಕಾ ಮಹಾತ್ಮೆ ಇವರು ರಚಿಸಿದ ಯಕ್ಷಗಾನ ಪ್ರಸಂಗ ಕೃತಿಗಳು. ವಿಶ್ವಾಮಿತ್ರ ಪ್ರತಾಪ–ದುಷ್ಯಂತ ಚರಿತ್ರೆ 397 ಪದ್ಯಗಳಿಂದ ಕೂಡಿದ ಈ ಪ್ರಸಂಗವನ್ನು ಹಿರಿಯಣ್ಣ ಹೆಬ್ಬಾರರು 1909ರಲ್ಲಿ ರಚಿಸಿರುವುದಾಗಿ ತಿಳಿದುಬರುತ್ತದೆ. ಕಾಳಿದಾಸನ ಶಾಕುಂತಲಾ ನಾಟಕ ಆಧರಿಸಿ ಈ ಮೊದಲನೆಯ ಕೃತಿಯನ್ನು ಹೆಬ್ಬಾರರು ರಚಿಸಿದ್ದಾರೆ. ವಿಶ್ವಾಮಿತ್ರ ಪ್ರತಾಪ ಪ್ರಸಂಗವನ್ನು 1925ರಲ್ಲಿ ಪ್ರಥಮವಾಗಿ ಉಡುಪಿಯ ಶ್ರೀಮನ್ಮಧ್ವ ಸಿದ್ಧಾಂತ ಗ್ರಂಥಾಲಯದವರು ಪ್ರಕಟಿಸಿದ್ದಾರೆ. 1958 ರಲ್ಲಿ ಮರು ಮುದ್ರಣಗೊಂಡಿದೆ. ಭಾನುಮತಿ ಕಲ್ಯಾಣ ಅಥವಾ ನಿಕುಂಭಾಸುರ ವಧೆ ಪ್ರಸಂಗ 1937 ರಲ್ಲಿ ರಚಿತವಾದ ಪ್ರಸಂಗ. ಶ್ರೀ ಹರಿವಂಶ ಪುರಾಣ ಆಧಾರಿತ 430 ಪದ್ಯಗಳಿಂದ ಕೂಡಿದ ಈ ಪ್ರಸಂಗವನ್ನು ಕಾವ್ಯಾಲಯ ಪ್ರಕಾಶನ ಮೈಸೂರು 1958 ರಲ್ಲಿ ಪ್ರಕಟಿಸಿದ್ದಾರೆ. ಈ ಪ್ರಸಂಗದ ಪದ್ಯಗಳು ಕವಿಯ ಪ್ರೌಢಿಮೆಗೆ ನಿದರ್ಶನವಾಗಿವೆ ಛಂದೋಬಂಧಗಳ ವೈವಿಧ್ಯ, ಸಂವಾದ ಸೌಂದರ್ಯ, ಶಬ್ದಾಲಂಕಾರ ಮುಂತಾದ ಸೊಬಗಿನಿಂದ ಓದು ಕಾವ್ಯವಾಗಿಯೂ ಗುರುತಿಸಲ್ಪಟ್ಟಿದೆ. ಬವಲಾಡಿಯವರು ರಚಿಸಿದ ಇನ್ನೊಂದು ಪ್ರಸಂಗ ಪಾಂಡವ ವಿಜಯ. 445 ಪದ್ಯಗಳಿಂದ ಕೂಡಿದ ಈ ಪ್ರಸಂಗವನ್ನು 1916 ರಲ್ಲಿ ರಚಿಸಿರುವುದಾಗಿ ತಿಳಿದುಬರುತ್ತದೆ. ಇದನ್ನು ಉಡುಪಿಯ ಶ್ರೀ ಮನ್ಮಧ್ವ ಸಿದ್ಧಾಂತ ಗ್ರಂಥಾಲಯದವರು 1925 ರಲ್ಲಿ ಪ್ರಕಟಿಸಿದ್ದಾರೆ. ಮುದ್ದಣನ ಸಮಕಾಲೀನರಾಗಿದ್ದ ಇವರು ತಮ್ಮ ಯಕ್ಷಗಾನ ಪ್ರಸಂಗಗಳಲ್ಲಿ ಅವನ ಕಾವ್ಯದ ಶೈಲಿಯನ್ನು ಅನುಸರಿಸಿರುವುದಾಗಿ ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ.

***ಲೇಖಕರು– ಉಮೇಶ ಶಿರೂರು, ಬೆಂಗಳೂರು 9448353910***

## ಯಕ್ಷಗಾನದ ಮೊದಲ ಎಐ ಪ್ರಚಾರಕ ಭೀಷ್ಮ




ಮಾಧ್ಯಮದಲ್ಲಿ ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ (ಎಐ) ಆಂಕರ್ ಈಗಿನ ಟ್ರೆಂಡ್. ಇದೇ ತಂತ್ರಜ್ಞಾನವನ್ನು ಬಳಸಿಕೊಂಡು ಯಕ್ಷಗಾನ ಪ್ರಸಂಗದ ಪ್ರಚಾರವನ್ನು ಜಾಲತಾಣಗಳಲ್ಲಿ ಮಾಡಲಾಗಿದೆ. ಈ ವರ್ಷ ನೀಲಾವರ ಮೇಳದ ತಿರುಗಾಟದ ಪ್ರಸಂಗ ಪಾತಾಳ ಭೈರವ ಇದರ ಪ್ರಮೋಷನ್ ಅನ್ನು ಎಐ ಪ್ರಚಾರಕನಿಂದ ಮಾಡಿಸಲಾಗಿದೆ. ಯಕ್ಷಗಾನದ ಪ್ರಚಾರಕ್ಕಾಗಿ ಎಐ ಪ್ರಚಾರಕನನ್ನು ಬಳಸಿಕೊಂಡಿರುವುದು ಇದೇ ಮೊದಲು. ಯಕ್ಷಗಾನದ ಮೊದಲ ಎಐ ಪ್ರಚಾರಕನಿಗೆ ಭೀಷ್ಮ ಎಂದು ಹೆಸರು ನೀಡಿದ್ದು ಈತ ವಾರ್ತಾ ವಾಚಕನಂತೆ ಪ್ರಸಂಗದ ಮಾಹಿತಿಗಳನ್ನು ನೀಡಿದ್ದಾನೆ. ಈ ಎಐ ಪ್ರಚಾರಕನ ಧ್ವನಿ, ಗಗನ್ ಎಂಬ ವರ್ಚುವಲ್ ಕಲಾವಿದನದಾಗಿದ್ದು ಈ ಪ್ರಚಾರ ವೀಡಿಯೋದ ಸ್ಕ್ರಿಪ್ಟ್ ನ್ನು ಶುಭಾಶಯ ಜೈನ್ ರವರು ಬರೆದು ಎಡಿಟ್ ಮಾಡಿದ್ದಾರೆ. ನೀಲಾವರ ಮೇಳದಲ್ಲಿ ಪ್ರದರ್ಶನ ಕಾಣಲಿರುವ ಪಾತಾಳ ಭೈರವ ಪ್ರಸಂಗವನ್ನು ಶುಭಾಶಯ ಜೈನ್ ರವರು ರಚಿಸಿದ್ದು ಇದು ಸಾಮಾಜಿಕ ಕಥಾನಕವಾಗಿದೆ. ಮೇಳದ ಕಲಾವಿದರಾಗಿ ಹಿಮ್ಮೇಳದಲ್ಲಿ ನವೀನ್ ಕೋಟ, ಚಂದ್ರಯ್ಯ ಆಚಾರ್, ರಾಜಾರಾಮ ಹೆಗಡೆ, ಪ್ರಶಾಂತ್ ಭಂಡಾರಿ, ಶಿವಾನಂದ್ ಗುಲ್ವಾಡಿ, ಮುಮ್ಮೇಳದಲ್ಲಿ ಶಿವರಾಮ ಶೆಟ್ಟಿ, ದೇವರಾಜ್ ಸಂಡಳ್ಳಿ, ಗೌರಿಶ್ ಕೆದೂರು, ಮಂಜುನಾಥ್ ಕುಲಾಲ್, ವಿಶ್ವರೂಪ ಮಧ್ಯಸ್ಥ, ನಾಗೇಶ್, ಉಲ್ಲಾಸ್, ಪ್ರಸಾದ್ ಚೇರ್ಕಾಡಿ, ಸಂಜೀವ ಕೊಠಾರಿ, ಜಿತೇಶ್, ರವಿ ನಾಯ್ಕ, ಸುಧಾಕರ್ ಪೂಜಾರಿ, ರವಿ ಮುನಿಯಾಲ್, ಆದಿತ್ಯ, ಪ್ರಜ್ವಲ್, ಮೊದಲಾದವರು ಕಾಣಿಸಿಕೊಳ್ಳಲಿದ್ದಾರೆ.